# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ನವೆಂಬರ್ 04, 2021

ಸಂಪುಟ : 48 ಸಂಚಿಕೆ : 174 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com







# ದೀಪಾವಳಿ ಹಬ್ಬಕ್ಕೆ ಸಂಭ್ರಮದ ಸಿದ್ಧತೆ



## ಪಟಾಕಿ ವ್ಯಾಪಾರ ಕಡಿಮೆ

**ನಗರದ ಹೈಸ್ಕೂಲ್ ಮೈದಾನದಲ್ಲಿ 52 ಪಟಾಕಿ ಮಳಿಗೆಗಳನ್ನು ತೆರೆಯಲಾಗಿದೆ. ಹಸಿರು ಪಟಾಕಿ ಮಾರಾಟಕ್ಕೆ ಮಾತ್ರ ಸರ್ಕಾರ ಅವಕಾಶ ನೀಡಲಾಗಿದೆ. ಬುಧವಾರ ಪಟಾಕಿ ಖರೀದಿಗೆ ಅಷ್ಟಾಗಿ ಗ್ರಾಹಕರು ಮುಂದಾಗಿರಲಿಲ್ಲವಾದರೂ, ಶುಕ್ರವಾರ ಬಲಿಪಾಡ್ಯ ಇರುವುದರಿಂದ ಮುಂದಿನ ಎರಡು ದಿನಗಳು ಪಟಾಕಿ ಖರೀದಿ ಹೆಚ್ಚಾಗುವ ನಿರೀಕ್ಷೆ ಇದೆ. ಎಂ.ಆರ್.ಪಿ. ದರಕ್ಕಿಂತ ಶೇ.50ರಷ್ಟು ಕಡಿಮೆ ದರಕ್ಕೆ ಪಟಾಕಿ ಮಾರಾಟ ಮಾಡಬೇಕೆಂದು ಜಿಲ್ಲಾಧಿಕಾರಿಗಳು ಆದೇಶವಿದೆಯಾದರೂ, ಪಾಲನೆಯಾಗದೇ ಇರುವುದು ಕಂಡು ಬಂತು.**

ದಾವಣಗೆರೆ, ನ.3- ಹಣತೆ ಹಚ್ಚಿ, ಪಟಾಕಿ ಸಿಡಿಸಿ ಸಂಭ್ರಮಿಸುವ ದೀಪಾವಳಿ ಹಬ್ಬಕ್ಕೆ ಎಲ್ಲೆಡೆ ಭರದ ಸಿದ್ಧತೆ ಆರಂಭಗೊಂಡಿದೆ. ನರಕ ಚತುರ್ದಶಿಯನ್ನು ಬುಧವಾರ ಆಚರಿಸಿರುವ ಜಿಲ್ಲೆಯ ಜನತೆ, ದೀಪಾವಳಿ ಸಂಭ್ರಮಿಸಲು ಅಗತ್ಯ ತಯಾರಿ ನಡೆಸಿದ್ದಾರೆ.

**ಖರೀದಿ ಜೋರು:** ದೀಪಾವಳಿ ಹಬ್ಬಕ್ಕೆ ಬೇಕಾದ ಕಾಚಿಕಡ್ಡಿ, ಮಾವಿನ ಸೊಪ್ಪು, ಬಾಳೆ ಕಂಬ, ಹೂ ಮತ್ತಿತರೆ ವಸ್ತುಗಳ ಮಾರಾಟ ಬುಧವಾರ ತಡರಾತ್ರಿ ವರೆಗೂ ನಡೆಯಿತು. ಮಂಡಿಪೇಟೆ, ಚಾಮರಾಜ ವೃತ್ತ, ಹೈಸ್ಕೂಲ್ ಮೈದಾನ, ಪಿ.ಬಿ. ರಸ್ತೆ, ನಿಟುವಳ್ಳಿ ದುರ್ಗಾಂಬಿಕಾ ದೇವಿ ದೇವಸ್ಥಾನ ಬಳಿ, ಹೊಂಡದ ವೃತ್ತ, ಜಿಲ್ಲಾ ಕ್ರೀಡಾಂಗಣದ ಬಳಿ ಸೇರಿ ದಂತೆ ಪ್ರಮುಖ ವೃತ್ತಗಳಲ್ಲಿ ವ್ಯಾಪಾರದ ಭರಾಟೆ ಹೆಚ್ಚಾಗಿತ್ತು.

ಪ್ರಮುಖ ವೃತ್ತ ಹಾಗೂ ರಸ್ತೆಗಳ ಬದಿಯಲ್ಲಿಯೇ ಹಳ್ಳಿಗರು ಅಗತ್ಯ ವಸ್ತುಗಳ್ನು ಮಾರಾಟಕ್ಕೆ ಇಟ್ಟಿದ್ದರಿಂದ ಆರ್.ಹೆಚ್. ಛತ್ರ ಹಾಗೂ ಜಿಲ್ಲಾ ಕ್ರೀಡಾಂಗಣದ ಬಳಿ ಸಂಜೆ ವಾಹನ ಸಂಚಾರಕ್ಕೆ ಅಡೆ ತಡೆಯುಂಟಾಗುತ್ತಿತ್ತು. ಮಾರುಕಟ್ಟೆ ಪ್ರದೇಶದಲ್ಲಿ ವಾಹನ ಸಂಚಾರ ಹೆಚ್ಚಾಗಿತ್ತು.

**ರಿಯಾಯಿತಿ ಆಕರ್ಷಣೆ:** ಮೊಬೈಲ್, ಎಲೆಕ್ಟ್ರಾನಿಕ್ಸ್ ಅಂಗಡಿಗಳು, ಬಟ್ಟೆ ಅಂಗಡಿಗಳು, ಚಿನ್ನದ ಅಂಗಡಿಗಳಲ್ಲಿ ಹಬ್ಬಕ್ಕಾಗಿ ವಿಶೇಷ ರಿಯಾಯಿತಿ ಘೋಷಿಸಿದ್ದವು. ಅಂಗಡಿ ಮಳಿಗೆಗಳ ಮುಂಭಾಗ ಬಲೂನು, ವಿದ್ಯುತ್ ದೀಪಗಳಿಂದ ಅಲಂಕರಿಸಿ, ಗ್ರಾಹಕರನ್ನು ಸೆಳೆಯುತ್ತಿದ್ದರು. ಆದರೆ ಗ್ರಾಹಕರ ಸಂಖ್ಯೆ ವಿರಳವಾಗಿತ್ತು.

**ಆಕಾಶ ಬುಟ್ಟಿಗಳ ಆಕರ್ಷಣೆ:** ಮನೆಗಳ ಮುಂಭಾಗ ಅಂದದ ಆಕಾಶ ಬುಟ್ಟಿಗಳನ್ನು ತೂಗು ಹಾಕಲಾಗಿತ್ತು. ಅಂಗಡಿಗಳಲ್ಲಿ ವಿವಿಧ ಬಗೆಯ ಆಕಾಶಬುಟ್ಟಿಗಳ ಮಾರಾಟವೂ ನಡೆಯಿತು. ಬೀದಿ ಬದಿಗಳಲ್ಲಿ, ಮಾರುಕಟ್ಟೆಗಳಲ್ಲಿ ಹಣತೆ ಖರೀದಿ ಜೋರಾಗಿದೆ. ಬಗೆಬಗೆಯ ಹಣತೆ, ಗೂಡು ದೀಪಗಳು ಲಭ್ಯವಿದ್ದರೂ ಪರಿಸರಸ್ನೇಹಿ ವಸ್ತುಗಳಿಗೆ ಬೇಡಿಕೆ ಹೆಚ್ಚಿದೆ.

**ಬಟ್ಟೆ ಅಂಗಡಿಗಳಲ್ಲಿ ಖರೀದಿ ಹೆಚ್ಚು:** ದೀಪಾವಳಿ ಹಬ್ಬಕ್ಕೆ ಹೊಸ ಬಟ್ಟೆ ತೊಡುವುದು ವಾಡಿಕೆ. ಅಲ್ಲದೆ ಹಿರಿಯರ ಪೂಜೆ ಮಾಡುವ ಪದ್ಧತಿ ಹೆಚ್ಚಾಗಿದ್ದು, ಈ ಹಿನ್ನೆಲೆಯಲ್ಲಿ ಬಟ್ಟೆ ಅಂಗಡಿಗಳಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಾಗಿತ್ತು. ಸಂಜೆ ಮಳೆ ಆರಂಭವಾಗಿದ್ದರಿಂದ ವ್ಯಾಪಾರಕ್ಕೆ ತುಸು ತೊಂದರೆಯಾಗಿತ್ತು.

# ಮನೆ ಮನೆಗೆ ತೆರಳಿ ಲಸಿಕೆ ಅಭಿಯಾನ : ಪ್ರಧಾನಿ ಮೋದಿ ಕರೆ

ನವದೆಹಲಿ, ನ. 3 – ಮನೆ ಮನೆಗೆ ತೆರಳಿ ಕೊರೊನಾ ಲಸಿಕಾ ಅಭಿಯಾನ ನಡೆಸುವ ಅಗತ್ಯವಿದೆ ಎಂದು ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕಡಿಮೆ ಲಸಿಕೆಯಾಗಿರುವ ಜಿಲ್ಲೆಗಳಲ್ಲಿ ಆವಿಷ್ಕಾರಿ ಪದ್ಧತಿಗಳನ್ನು ರೂಢಿಸಿಕೊಳ್ಳುವಂತೆ ಕರೆ ನೀಡಿದ್ದಾರೆ.

ಲಸಿಕೆ ಕಡಿಮೆಯಾಗಿರುವ 40 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ಪ್ರಧಾನಿ ಮೋದಿ, ಧಾರ್ಮಿಕ ನಾಯಕರ ಮೂಲಕ ಲಸಿಕೆ ಬಗ್ಗೆ ಅರಿವು ಮೂಡಿಸಬೇಕು ಎಂದು ತಿಳಿಸಿದ್ದಾರೆ.

ಇದುವರೆಗೂ ನೀವು ಜನರನ್ನು ಲಸಿಕಾ ಕೇಂದ್ರಗಳಿಗೆ ಕರೆ ತರಲು ಕಾರ್ಯ ನಿರ್ವಹಿಸುತ್ತಿದ್ದಿರಿ. ಈಗ ಪ್ರತಿಯೊಂದು ಮನೆಗೆ ಭೇಟಿ ನೀಡಿ ಲಸಿಕೆ ನೀಡುವ ಅಗತ್ಯವಿದೆ ಎಂದು ಹೇಳಿದ್ದಾರೆ.

ಮೊದಲ ಲಸಿಕೆ ಪಡೆದವರಿಗೆ ಸಮಯಕ್ಕೆ ಸರಿಯಾಗಿ ಎರಡನೇ ಲಸಿಕೆ ನೀಡುವ ಅಗತ್ಯವಿದೆ. ಶತಕೋಟಿ ಡೋಸ್ ಲಸಿಕೆ ನೀಡಲಾಗಿದೆ ಎಂದು ಮೈ ಮರೆಯುವಂತಿಲ್ಲ. ಹೊಸ ಬಿಕ್ಕಟ್ಟು ಬರಬಹುದು. ಹೋರಾಟ ಸಂಪೂರ್ಣ ಮುಗಿಯುವವರೆಗೆ ರೋಗ ಹಾಗೂ ಶತ್ರುವನ್ನು ಕಡೆಗಣಿಸಬಾರದು ಎಂದು ಮೋದಿ ತಿಳಿಸಿದ್ದಾರೆ.

ಶೇ.50ಕ್ಕಿಂತ ಕಡಿಮೆ ಜನರು ಮೊದಲ ಡೋಸ್ ಪಡೆದಿರುವ ಹಾಗೂ ಎರಡನೇ ಡೋಸ್ ಪ್ರಮಾಣ ಕಡಿಮೆ ಇರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆ ಪ್ರಧಾನಿ ವಿಡಿಯೋ ಕಾನ್ಫರೆನ್ಸ್ ನಡೆಸಿದ್ದಾರೆ.

ಜಾರ್ಖಂಡ್, ಮಣಿಪುರ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಮಹಾರಾಷ್ಟ್ರ ಹಾಗೂ ಮೇಘಾಲಯ ಸೇರಿದಂತೆ, ಹಲವು ರಾಜ್ಯಗಳಲ್ಲಿ ಈ ಜಿಲ್ಲೆಗಳಿವೆ. ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹಾಗೂ ಛತ್ತೀಸ್‌ಘಡದ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ಸಹ ಸಭೆಯಲ್ಲಿ ಉಪಸ್ಥಿತರಿದ್ದರು.







# ಉತ್ಸಾಹಿ, ಚೈತನ್ಯಶೀಲ ಮನಸಿದ್ದವರೆಲ್ಲರೂ ಯುವಪೀಳಿಗೆಯೇ : ಸಾಣೇಹಳ್ಳಿ ಪಂಡಿತಾರಾಧ್ಯ ಶ್ರೀ



ಸಾಣೇಹಳ್ಳಿ, ನ.3- 18 ವರ್ಷದಿಂದ 35 ವರ್ಷದದೊಳಗಿನವರನ್ನು ಮಾತ್ರ ಯುವಪೀಳಿಗೆ ಎಂದು ತಿಳಿಯುವುದು ತಪ್ಪು ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಶ್ರೀ ಶಿವಕುಮಾರ ಕಲಾಸಂಘ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ನಾಟಕೋತ್ಸವದ ನೇತೃತ್ವ ವಹಿಸಿ ಮಾತನಾಡಿದ ಶ್ರೀಗಳು, ಹಳೆ ಬೇರು, ಹೊಸ ಚಿಗುರು ಕೂಡಿರಲು ಮರ ಸೊಬಗು ಎನ್ನುವಂತೆ ವಿಜ್ಞಾನ, ತತ್ವಜ್ಞಾನ ಮೈಗೂಡಿಸಿಕೊಂಡು ಆದರ್ಶ ಪಥದಲ್ಲಿ ನಡೆಯುವ ಹೊಣೆಗಾರಿಕೆ ಯುವಪೀಳಿಗೆಯದು. ಇಂತಹ ಯುವ ಪೀಳಿಗೆಗೆ ಬಸವಣ್ಣನವರಂತಹ ನಾಯಕರ ಅಗತ್ಯವಿದೆ ಎಂದು.

ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಕೃಷಿ ಮತ್ತಿತರೆ ಕ್ಷೇತ್ರಗಳಲ್ಲಿರುವ ಹಲವು ಅಪಸವ್ಯಗಳನ್ನು ಹೋಗಲಾಡಿಸುವ ಜವಾಬ್ದಾರಿಯನ್ನು ಯುವಪೀಳಿಗೆ ತೆಗೆದುಕೊಳ್ಳಬೇಕಿದೆ. ಇಂದಿನ ಯುವ ಪೀಳಿಗೆಯೇ ಮುಂದಿನ ನಾಯಕರು. ಅವರು ಸನಾತನತೆಯ ಸಂದೇಶ ವಾಹಕರಾಗಬೇಕು. ವ್ಯಕ್ತಿಗತ ದೌರ್ಬಲ್ಯ, ದುಶ್ಚಟ, ದುರಭ್ಯಾಸಗಳಿಂದ ಹೊರಬರಬೇಕು. ಎಷ್ಟೋ ಯುವ ಪೀಳಿಗೆ ಮೂಗುದಾರವಿಲ್ಲದ ಗೂಳಿಯಂತಾಗುತ್ತಿದ್ದಾರೆ. ಅವರನ್ನು ಸರಿದಾರಿಯಲ್ಲಿ ಕರೆದೊಯ್ಯುವ ಜವಾಬ್ದಾರಿಯನ್ನು ಮನೆ, ಮಠ ಮತ್ತು ಸಮಾಜದ ಹಿರಿಯರು ನಿರ್ವಹಿಸಬೇಕು ಎಂದು ಹೇಳಿದರು.

ಯುವಶಕ್ತಿಯ ಸದ್ಬಳಕೆ ಆದರೆ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅದ್ಭುತ ಪ್ರಗತಿ ಸಾಧಿಸಬಹುದು. ಅವರು ಮನೆ, ಮಠ, ಸಮಾಜದ ಜವಾಬ್ದಾರಿಯನ್ನು ನಿರ್ವಹಿಸುವ ರೀತಿಯಲ್ಲಿ ಬಾಲ್ಯದಿಂದಲೇ ಸಂಸ್ಕಾರವಂತರನ್ನಾಗಿಸಬೇಕು. ಆಧುನಿಕ ತಂತ್ರಜ್ಞಾನದ ದಾಸರಾಗಿ ಅವರು ತಮ್ಮತನ ಕಳೆದುಕೊಳ್ಳದ ಹಾಗೆ ಎಚ್ಚರಿಸಬೇಕಾಗಿದೆ ಎಂದರು.

## ಸಾಣೇಹಳ್ಳಿಯಲ್ಲಿ ನಾಟಕೋತ್ಸವ

ಸಾನ್ನಿಧ್ಯ ವಹಿಸಿದ್ದ ನಾಗನೂರು-ಬೆಳಗಾವಿ ರುದ್ರಾಕ್ಷಿ ಮಠದ ಡಾ. ಅಲ್ಲಮಪ್ರಭು ಸ್ವಾಮೀಜಿ ಮಾತನಾಡಿ, ಪಂಡಿತಾರಾಧ್ಯ ಶ್ರೀಗಳು ರಂಗಭೂಮಿ ನಶಿಸುತ್ತಿರುವ ಸಂದರ್ಭದಲ್ಲಿ ಅದಕ್ಕೆ ಪುನಶ್ಚೇತನ ನೀಡಿದ 25 ವರ್ಷಗಳ ಸಾರ್ಥಕ ಕಾರ್ಯ ಹೆಮ್ಮೆಪಡುವಂಥದ್ದು.

ಶಿವಸಂಚಾರ ನಾಡಿನ ಹೆಮ್ಮೆಯ ತಂಡ. ಪೂಜ್ಯರು ನಮ್ಮಂಥ ಯತಿಗಳಿಗೆ ಆದರ್ಶಪ್ರಾಯರು. ಕುಂಟುತ್ತಿರುವ ಸಮಾಜವನ್ನು ಮತ್ತೆ ಸರಿಮಾಡುವ ಕೆಲಸವನ್ನು ಪೂಜ್ಯರು ಮಾಡುತ್ತಿದ್ದಾರೆ. ಲಿಂಗಾಯತ ಧರ್ಮಕ್ಕೆ ಬದ್ಧತೆಯಿಂದ ಇರುವವರು ಪಂಡಿತಾರಾಧ್ಯ ಸ್ವಾಮೀಜಿಗಳು ಎಂದರು.

'ಯುವ ಪೀಳಿಗೆಯ ಜವಾಬ್ದಾರಿ' ಕುರಿತು ಉಪನ್ಯಾಸ ನೀಡಿದ ಸಿಐಡಿ ಎಸ್‌ಪಿ ರವಿ ಡಿ. ಚೆನ್ನಣ್ಣನವರ್ ಮಾತನಾಡಿ, ಹಿಂದೆ ಖಡ್ಗ ಜಗತ್ತನ್ನು ಆಳುತ್ತಿದ್ದರೆ, ಇಂದು ಜ್ಞಾನ ಆಳುತ್ತಿದೆ. ಸಾಹಿತ್ಯವನ್ನು ಓದುವುದರ ಜೊತೆಗೆ ಅದರ ಆಳಕ್ಕೆ ಇಳಿದು ನಮ್ಮೊಡನೆ ಸಮೀಕರಿಸಿಕೊಳ್ಳಬೇಕು. ದೇಹಕ್ಕೆ ಆಹಾರ ಕೊಡುವಂತೆ ಪಂಚೇಂದ್ರಿಯಗಳಿಗೂ ಆಹಾರ ಕೊಡಬೇಕು. ಕೀಳರಿಮೆಯನ್ನು ಕಳೆದುಕೊಳ್ಳುವುದು ಯಶಸ್ಸಿನ ಮೊದಲ ಹೆಜ್ಜೆ. ಇಂಥ ಕಾರ್ಯಕ್ರಮಗಳು ನಮ್ಮ ಲೈಫ್ ಎನ್ನುವ ಬ್ಯಾಟರಿ ಚಾರ್ಜ್ ಮಾಡಲು ಅವಕಾಶ ಮಾಡಿಕೊಡುತ್ತವೆ ಎಂದರು.

ಸಣ್ಣ ನೀರಾವರಿ, ಕಾನೂನು ಸಂಸದೀಯ ವ್ಯವಹಾರ ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, ನಾಟಕಗಳ ಮೂಲಕ ಸಮಾಜ ತಿದ್ದುವ ಕೆಲಸ ಸಾಧ್ಯ. ಆದರೆ ಇತ್ತೀಚಿನ ಆಧುನಿಕ ತಂತ್ರಜ್ಞಾನಗಳ ಪ್ರಭಾವ ನಾಟಕ ಕ್ಷೇತ್ರವನ್ನು ಕ್ಷೀಣಿಸುವಂತೆ ಮಾಡಿದೆ ಎಂದರು.

ಸಚಿವ ಕೆ.ಎಸ್. ಈಶ್ವರಪ್ಪ ಮಾತನಾಡಿ, ಪ್ರಪಂಚವೇ ಮೆಚ್ಚುವಂಥದ್ದು ಭಾರತೀಯ ಸಂಸ್ಕೃತಿ. ಈ ಸಂಸ್ಕೃತಿಗೆ ಎಂದೂ ಕೂಡ ಅಂತ್ಯವಿಲ್ಲ ಎಂದರು.

ತರೀಕೆರೆ ಶಾಸಕ ಡಿ.ಎಸ್. ಸುರೇಶ್, ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ, ವಿಧಾನ ಪರಿಷತ್ ಸದಸ್ಯ ವೈ.ಎ. ನಾರಾಯಣಸ್ವಾಮಿ ಮಾತನಾಡಿದರು. ಎಸ್.ಜಿ. ಸಿದ್ಧರಾಮಯ್ಯನವರು ಸಂಪಾದಿಸಿದ 'ಕ್ರಾಂತಿಯ ಹೆಜ್ಜೆಗಳು' ಕೃತಿಯನ್ನು ನಾಗನೂರು-ಬೆಳಗಾವಿ ರುದ್ರಾಕ್ಷಿ ಮಠದ ಡಾ. ಅಲ್ಲಮಪ್ರಭು ಸ್ವಾಮೀಜಿ ಲೋಕಾರ್ಪಣೆಗೊಳಿಸಿದರು.

# ಸಕ್ಕರೆ ನಿಯಂತ್ರಣ ಕಾಯ್ದೆ 1966ಕ್ಕೆ ತಿದ್ದುಪಡಿ ಕೈ ಬಿಡಲು ಒತ್ತಾಯ

ದಾವಣಗೆರೆ, ನ.3-ಕಬ್ಬು ಪೂರೈಕೆ ಮಾಡಿದ ರೈತರಿಗೆ 14 ದಿನಗಳಲ್ಲಿ ಹಣ ಪಾವತಿಸಬೇಕು. ವಿಳಂಬವಾದರೆ ಶೇ.15ರಷ್ಟು ಬಡ್ಡಿ ಸೇರಿಸಿ ಕೊಡಬೇಕೆಂಬ ನಿಯಮ ಇರುವ ಸಕ್ಕರೆ ನಿಯಂತ್ರಣ ಕಾಯ್ದೆ 1966ಕ್ಕೆ ತಿದ್ದುಪಡಿ ಮಾಡ ಹೊರಟಿರುವ ಕೇಂದ್ರ ಸರ್ಕಾರದ ನಿರ್ಧಾರ ಕಬ್ಬು ಬೆಳೆಗಾರರ ಕತ್ತು ಕೊಯ್ಯುವ ಕಾರ್ಯವಾಗಿದ್ದು, ಈ ಬಗ್ಗೆ ನೀತಿ ಆಯೋಗ ನೀಡಿರುವ ವರದಿಯನ್ನು ತಿರಸ್ಕರಿಸಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಕಬ್ಬು ಹಾಗೂ ಭತ್ತ, ಮೆಕ್ಕೆಜೋಳ ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ಕೇವಲ ಅರ್ಧ ಪರ್ಸೆಂಟ್ ಏರಿಕೆ ಮಾಡುತ್ತದೆ. ಆದರೆ ಸರ್ಕಾರಿ ನೌಕರರ ನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆ ಅನುಸಾರ ಶೇ.3ರಷ್ಟು ತುಟ್ಟಿಭತ್ಯೆ ಏರಿಕೆ ಮಾಡುತ್ತಿದೆ. ಇದು ರೈತರಿಗೆ ಮಾಡುತ್ತಿರುವ ವಂಚನೆಯಲ್ಲವೇ? ಎಂದು ಪ್ರಶ್ನಿಸಿದ ಅವರು, ಕೇಂದ್ರ ಸರ್ಕಾರದ ಅವೈಜ್ಞಾನಿಕ ನೀತಿಗಳಿಂದ ರೈತ ದುರ್ಬಲನಾಗುತ್ತಿದ್ದಾನೆ. ರೈತರ ಆದಾಯ ಕಡಿಮೆಯಾಗಿ ತಿಂಗಳಿಗೆ 31000 ರೂ. ಆಗಿದೆ ಕೂಲಿ ಕಾರ್ಮಿಕರ ಆದಾಯ 4100 ಆಗಿದೆ ಎಂದು ಆರೋಪಿಸಿದರು.

ಕಬ್ಬಿನಿಂದ ಎಥೆನಾಲ್ ಉತ್ಪಾದನೆ ಮತ್ತು ಅದರ ಖರೀದಿಗೆ ಕೇಂದ್ರ ಸರ್ಕಾರ ಲೀಟರ್‌ಗೆ 65 ರೂ. ನಿಗದಿ ಮಾಡುತ್ತದೆ. ಆದರೆ ಚೀನಾ ದೇಶದಿಂದ ಲೀಟರ್‌ಗೆ 500 ರೂ. ಕೊಟ್ಟು ಅಮದು ಮಾಡಿಕೊಳ್ಳುತ್ತದೆ. ಇಂತಹ ಇಬ್ಬಗೆಯ ನೀತಿಗಳಿಂದ ದೇಶದ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಎಂದು ದೂರಿದರು.

ಕಬ್ಬಿನ ಎಫ್‌ಆರ್‌ಪಿ ದರ ಪುನರ್ ಪರಿಶೀಲಿಸಲು

**ರೈತರು ಬಂಗಾರ ಒತ್ತೆ ಇಟ್ಟು ಪಡೆದ ಸಾಲವನ್ನು ತೀರಿಸಿದರೂ ಬ್ಯಾಂಕಿನವರು ಕೃಷಿ ಸಾಲ ತೀರಿಸದ ಹೊರತು ಬಂಗಾರ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಶೀಘ್ರವೇ ಲೀಡ್ ಬ್ಯಾಂಕ್ ಅಧಿಕಾರಿಗಳ ನೇತೃತ್ವದಲ್ಲಿ ಸಭೆ ಕರೆದು, ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದು.**

**- ತೇಜಸ್ವಿ ಪಟೇಲ್**

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಪ್ರತಿಭಟನಾ ರ್‍ಯಾಲಿ ಸಂದರ್ಭದಲ್ಲಿ ಮುಖ್ಯಮಂತ್ರಿಗಳು, ಸಕ್ಕರೆ ಸಚಿವರು ಹಾಗೂ ಕೃಷಿ ಸಚಿವರು ಒಪ್ಪಿ ತಿಂಗಳಾಗಿವೆ. ಈ ಬಗ್ಗೆ ಯಾವುದೇ ಕ್ರಮ ಜಾರಿಯಾಗಿಲ್ಲ. ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲು ಸದ್ಯದಲ್ಲಿ ಮುಖ್ಯಮಂತ್ರಿಗಳನ್ನು ರಾಜ್ಯ ಪದಾಧಿಕಾರಿಗಳ ನಿಯೋಗದೊಂದಿಗೆ ಭೇಟಿ ಮಾಡಲಾಗುವುದು ಎಂದು ಹೇಳಿದರು.

ಸಂಘದ ಉಪಾಧ್ಯಕ್ಷ ತೇಜಸ್ವಿ ಪಟೇಲ್ ಮಾತನಾಡಿ, ಬರುವ ಡಿಸೆಂಬರ್ 23 ರಂದು ಮೈಸೂರಿನಲ್ಲಿ ರಾಜ್ಯ ಮಟ್ಟದ ವಿಶ್ವ ರೈತ ದಿನಾಚರಣೆಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಧ್ಯಾಹ್ನ ಮೂರು ಕೃಷಿ ಕಾಯ್ದೆಗಳ ಬಗ್ಗೆ ಸಂವಾದ ಕಾರ್ಯಕ್ರಮ ಇರಲಿದೆ. ಜಿಲ್ಲೆಯ ಎಲ್ಲಾ ರೈತ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಸಂಘಟನಾ ಕಾರ್ಯದರ್ಶಿ ಹತ್ತಳ್ಳಿ ದೇವರಾಜ್, ಸಂಚಾಲಕ ಎನ್. ಹೆಚ್. ದೇವಕುಮಾರ್, ಅಂಜಿನಪ್ಪ ಉಪಸ್ಥಿತರಿದ್ದರು.

## ಕೊವ್ಯಾಕ್ಸಿನ್ ಸಂಗ್ರಹ ಅವಧಿ 12 ತಿಂಗಳು ವಿಸ್ತರಣೆ

ನವದೆಹಲಿ, ನ. 3 – ಕೊವ್ಯಾಕ್ಸಿನ್ ಲಸಿಕೆ ಸಂಗ್ರಹದ ಅವಧಿಯನ್ನು 12 ತಿಂಗಳಿಗೆ ವಿಸ್ತರಿಸಲು ಕೇಂದ್ರ ಔಷಧ ಮಾನದಂಡಗಳ ನಿಯಂತ್ರಣ ಸಂಘಟನೆಯಾದ ಸಿ.ಡಿ.ಎಸ್.ಸಿ.ಒ. ಒಪ್ಪಿಗೆ ನೀಡಿದೆ ಎಂದು ಲಸಿಕೆ ಉತ್ಪಾದನಾ ಕಂಪನಿಯಾದ ಭಾರತ್ ಬಯೋಟೆಕ್ ತಿಳಿಸಿದೆ.

ಉತ್ಪಾದನಾ ದಿನದಂದು 12 ತಿಂಗಳವರೆಗೆ ಕೊವ್ಯಾಕ್ಸಿನ್ ದಾಸ್ತಾನು ಮಾಡಲು ಸಿ.ಡಿ.ಎಸ್.ಸಿ.ಒ. ಒಪ್ಪಿಗೆ ನೀಡಿದೆ. ತಾನು ಸಲ್ಲಿಸಿದ ಹೆಚ್ಚುವರಿ ಮಾಹಿತಿಯನ್ನು ಅವಲಂಬಿಸಿ, ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಭಾರತ್ ಬಯೋಟೆಕ್ ತಿಳಿಸಿದೆ.

## ಜಾಮೀನು ಆದೇಶ ತಲುಪಿಸುವಲ್ಲಿ ವಿಳಂಬ ಗಂಭೀರ ವಿಷಯ : ಸುಪ್ರೀಂ

ನವದೆಹಲಿ, ನ. 3 - ಜೈಲಿನ ಅಧಿಕಾರಿಗಳಿಗೆ ಜಾಮೀನಿನ ಆದೇಶ ತಲುಪಿಸುವಲ್ಲಿ ವಿಳಂಬವಾಗುವುದು ಗಂಭೀರ ಸಮಸ್ಯೆ ಎಂದು ಹೇಳಿರುವ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ಈ ಸಮಸ್ಯೆ ಬಗೆಹರಿಸಲು ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳಬೇಕಿದೆ ಎಂದಿದ್ದಾರೆ. ಅಲಹಾಬಾದ್ ಹೈಕೋರ್ಟ್ ಆನ್‌ಲೈನ್ ಮೂಲಕ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು, ಜಾಮೀನು ಆದೇಶ ತಲುಪಿಸುವಲ್ಲಿ ವಿಳಂಬವಾಗುವುದು ಅಪರಾಧಿಕ ನ್ಯಾಯಿಕ ವ್ಯವಸ್ಥೆಯಲ್ಲಿನ ಗಂಭೀರ ಕೊರತೆಯಾಗಿದೆ. ಈ ಸಮಸ್ಯೆಯನ್ನು ಸಮರೋಪಾದಿಯಲ್ಲಿ ಬಗೆಹರಿಸಬೇಕಿದೆ. ಇದು ವಿಚಾರಣಾಧೀನರು ಹಾಗೂ ಶಿಕ್ಷೆ ಅಮಾನತ್ತುಗೊಳಿಸಲ್ಪಟ್ಟ ದೋಷಿಗಳ ಮಾನವ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ವಿಷಯವಾಗಿದೆ ಎಂದು ಹೇಳಿದ್ದಾರೆ.

## ರಾಜ್ಯಗಳಿಗೆ 17 ಸಾವಿರ ಕೋಟಿ ರೂ. ಜಿಎಸ್‌ಟಿ ಪರಿಹಾರ

ನವದೆಹಲಿ, ನ. 3 – ರಾಜ್ಯಗಳ ಆದಾಯ ಕೊರತೆ ನೀಗಿಸಲು ಕೇಂದ್ರ ಸರ್ಕಾರ 17,000 ಕೋಟಿ ರೂ.ಗಳ ಜಿ.ಎಸ್.ಟಿ. ಪರಿಹಾರ ಬಿಡುಗಡೆ ಮಾಡಿದೆ.

ಇದರೊಂದಿಗೆ 2021-22ರ ಸಾಲಿನಲ್ಲಿ ಇದುವರೆಗೂ 60 ಸಾವಿರ ಕೋಟಿ ರೂ.ಗಳ ಪರಿಹಾರ ಬಿಡುಗಡೆ ಮಾಡಿದಂತಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಜಿ.ಎಸ್.ಟಿ. ಪರಿಹಾರಕ್ಕಾಗಿ ಜಿ.ಎಸ್.ಟಿ. ಮಂಡಳಿಯು ಈಗಾಗಲೇ 1.59 ಲಕ್ಷ ಕೋಟಿ ರೂ.ಗಳ ಸಾಲ ಪಡೆದಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ರಾಜ್ಯಗಳಿಗೆ 2.59 ಲಕ್ಷ ಕೋಟಿ ರೂ. ಪರಿಹಾರ ನೀಡಬೇಕಿದೆ ಎಂದು ಅಂದಾಜಿಸಲಾಗಿದೆ.

## ಕೊವ್ಯಾಕ್ಸಿನ್ ತುರ್ತು ಬಳಕೆಗೆ ಡಬ್ಲ್ಯೂಹೆಚ್‌ಒ ಅನುಮತಿ

ನವದೆಹಲಿ, ನ. 3 – ಭಾರತ್ ಬಯೋಟೆಕ್‌ನ ಕೊರೊನಾ ಲಸಿಕೆಯಾದ ಕೊವ್ಯಾಕ್ಸಿನ್‌ಗೆ ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯೂಹೆಚ್‌ಒ) ಬುಧವಾರ ತುರ್ತು ಬಳಕೆಯ ಅನುಮೋದನೆ ನೀಡಿದೆ.

ವಿಶ್ವ ಆರೋಗ್ಯ ಸಂಘಟನೆಯ ಸ್ವತಂತ್ರ ಸಲಹಾ ಸಮಿತಿಯು ನೀಡಿದ ವರದಿಯನ್ನು ಆಧರಿಸಿ ಅನುಮೋದನೆ ನೀಡಲಾಗಿದೆ.

ಅನುಮತಿಗಾಗಿ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಧನ್ಯವಾದ ಸಲ್ಲಿಸಿದ್ದಾರೆ.

ವಿಶ್ವದಾದ್ಯಂತ ಇರುವ ನಿಯಂತ್ರಕ ಪರಿಣಿತರು ಕೊವ್ಯಾಕ್ಸಿನ್ ಪರಿಶೀಲಿಸಿ ಅನುಮತಿಗೆ ವರದಿ ಸಲ್ಲಿಸಿದ್ದಾರೆ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ.

ಆದರೆ, ಗರ್ಭಿಣಿ ಮಹಿಳೆಯರಿಗೆ ಲಸಿಕೆ ನೀಡುವುದಕ್ಕೆ ಸಂಬಂಧಿಸಿದಂತೆ ಮಾಹಿತಿ ಅಸಮರ್ಪಕವಾಗಿದೆ. ಈ ಬಗ್ಗೆ ಅಧ್ಯಯನ ನಡೆಸಬೇಕಿದೆ ಎಂದು ವಿಶ್ವ ಆರೋಗ್ಯ ಸಂಘಟನೆ ಹೇಳಿದೆ.

ಲಸಿಕೆಯು ಕೊರೊನಾ ವಿರುದ್ಧ ಶೇ.78ರಷ್ಟು ಪರಿಣಾಮಕಾರಿಯಾಗಿದೆ. ಡೆಲ್ಟಾ ರೂಪಾಂತರಿ ವಿರುದ್ಧ ಲಸಿಕೆ ಶೇ.65.2ರಷ್ಟು ಪರಿಣಾಮಕಾರಿ. ಲಸಿಕೆ ಸುಲಭವಾಗಿ ಸಂಗ್ರಹಿಸಬಹುದಾದ ಕಾರಣ ಕಡಿಮೆ ಹಾಗೂ ಮಧ್ಯಮ ಆದಾಯದ ದೇಶಗಳ ಜನರ ಬಳಕೆಗೆ ಸೂಕ್ತವಾಗಿದೆ ಎಂದೂ ಸಂಘಟನೆ ಹೇಳಿದೆ.

# ದಿ. ಎಂ.ಪಿ. ರವೀಂದ್ರ ಕೇವಲ ಒಂದು ಹೆಸರಲ್ಲ ಅವರೊಬ್ಬ ಶಕ್ತಿಯಾಗಿದ್ದರು



ಹರಪನಹಳ್ಳಿ, ನ.3- ಮಾಜಿ ಉಪಮುಖ್ಯಮಂತ್ರಿ ದಿ. ಎಂ.ಪಿ. ಪ್ರಕಾಶ್ ಹಾಗೂ ಮಾಜಿ ಶಾಸಕ ದಿ. ಎಂ.ಪಿ. ರವೀಂದ್ರ ಇಲ್ಲದಿದ್ದರೂ, ಅವರು ಮಾಡಿದ ಕೆಲಸ, ಕಾರ್ಯಗಳು ಇನ್ನೂ ಜೀವಂತವಾಗಿವೆ. ಎಂ.ಪಿ. ರವೀಂದ್ರ ಒಂದು ಹೆಸರಲ್ಲ, ಅವರು ಒಬ್ಬ ಶಕ್ತಿ ಆಗಿದ್ದರು ಎಂದು ಹಡಗಲಿಯ ಡಾ. ಹಿರಿಶಾಂತವೀರ ಸ್ವಾಮೀಜಿ ಹೇಳಿದರು.

ಹಡಗಲಿಯ ರಂಗಭಾರತಿ ರಂಗ ಮಂದಿರದಲ್ಲಿ ಶ್ರೀಮತಿ ಎಂ.ಪಿ. ರುದ್ರಾಂಬ ಎಂ.ಪಿ.ಪ್ರಕಾಶ್ ಮತ್ತು ಕುಟುಂಬ ವರ್ಗ, ರಂಗಭಾರತಿ, ಶ್ರೀ ಎಂ.ಪಿ. ಪ್ರಕಾಶ್ ಪ್ರತಿಷ್ಠಾನ, ಶ್ರೀ ಎಂ.ಪಿ.ಪ್ರಕಾಶ್ ಸಮಾಜಮುಖಿ ಟ್ರಸ್ಟ್, ಎಂಪಿಆರ್ ಅಭಿಮಾನಿ ಬಳಗದ ವತಿಯಿಂದ ದಿ. ಎಂ.ಪಿ. ರವೀಂದ್ರ ಅವರ ತೃತೀಯ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಎಂ.ಪಿ. ರವೀಂದ್ರ ಬಡವರ, ನೊಂದವರ, ದೀನ ದಲಿತರ ಬಗ್ಗೆ ಸದಾ ಕಾಳಜಿ ಇದ್ದ ವ್ಯಕ್ತಿಯಾಗಿದ್ದರು. ಅಭಿವೃದ್ಧಿ ವಿಚಾರದಲ್ಲಿ ತಂದೆಯ ಗುಣಗಳನ್ನು ಅಳವಡಿಸಿಕೊಂಡು ಹರಪನಹಳ್ಳಿ ತಾಲ್ಲೂಕಿಗೆ 371ಜೆ ಸೌಲಭ್ಯ, 60 ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಬ್ರಿಡ್ಜ್ ಕಂ ಬ್ಯಾರೇಜ್ ಸೇರಿದಂತೆ, ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಜನ

## ದಿ. ಎಂ.ಪಿ. ರವೀಂದ್ರ ಅವರ ತೃತೀಯ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಡಾ. ಹಿರಿಶಾಂತವೀರ ಸ್ವಾಮೀಜಿ

ಮಾನಸದಲ್ಲಿ ನೆಲೆಸಿದ್ದಾರೆ ಎಂದರು.

ಎಂ.ಪಿ.ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ್ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಉತ್ತಮ ಹೆಸರನ್ನು ಗಳಿಸಿಕೊಂಡಿದ್ದ ಎಂ.ಪಿ. ರವೀಂದ್ರ ಹರಪನಹಳ್ಳಿ, ಹಡಗಲಿ, ಹಗರಿಬೊಮ್ಮನಹಳ್ಳಿ ಭಾಗದಲ್ಲಿ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸುವ ಮೂಲಕ ಸಹಕಾರಿ ರಂಗದಲ್ಲಿ ಅಪಾರ ಜನಮನ್ನಣೆ ಗಳಿಸಿದ್ದರು ಎಂದರು.

ಹಿರೇಮಲ್ಲನಕೇರಿಯ ಚನ್ನಬಸವ ಶಿವಯೋಗಿಗಳು, ಇಟಗಿ ಹಿರೇಮಠದ ಶ್ರೀಗಳು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಎಂ.ಪಿ. ರುದ್ರಾಂಬ, ಪುತ್ರಿ ಎಂ.ಪಿ. ಸುಮಾ, ವಿಜಯಕುಮಾರ್, ಮಹಾಂತೇಶ್ ಚರಂತಿಮಠ, ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರೇಗೌಡ, ಬಿ.ಕೆ. ಪ್ರಕಾಶ್, ಬಸವನಗೌಡ, ಸಿದ್ಧಲಿಂಗನಗೌಡ, ಸಾಸ್ವಿಹಳ್ಳಿ ಶಂಕ್ರಗೌಡ, ಸಂತೋಷ್ ಜೈನ್, ಹನುಮಂತಪ್ಪ, ಕೆ.ಎಂ. ವಾಗೀಶ್, ಇನ್ನಿತರರಿದ್ದರು.

# ಶಂಕರಾಚಾರ್ಯರ ಮೂರ್ತಿ ಲೋಕಾರ್ಪಣೆ ವೀಕ್ಷಣೆಗೆ ಅವಕಾಶ



ಹರಿಹರ, ನ.3- ದಿನಾಂಕ 5 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ಕೇದಾರನಾಥದಲ್ಲಿ ನಡೆಯುವ ಜಗದ್ಗುರು ಶ್ರೀ ಶಂಕರಾಚಾರ್ಯರ ಮೂರ್ತಿ ಲೋಕಾರ್ಪಣೆ ಕಾರ್ಯಕ್ರಮದ ನೇರ ಪ್ರಸಾರವನ್ನು ನಮ್ಮ ದಾವಣಗೆರೆ ಜಿಲ್ಲೆ ಜನತೆಗೆ ನೋಡುವ ಸುವರ್ಣ ಅವಕಾಶವನ್ನು ಭಾರತ ಸರ್ಕಾರದ ಆದೇಶದ ಮೇರೆಗೆ ಹರಿಹರದ ಹರಿಹರೇಶ್ವರ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ನಗರದ ಐತಿಹಾಸಿಕ ಶ್ರೀ ಹರಿಹರೇಶ್ವರ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಸ್ಥಳ ಪರಿಶೀಲನೆ ನಡೆಸಿ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಬೆಳಿಗ್ಗೆ 5 ಗಂಟೆಯಿಂದ ಶ್ರೀ ಹರಿಹರೇಶ್ವರ ಸ್ವಾಮಿಗೆ ದೇವಸ್ಥಾನದಲ್ಲಿ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಲಕ್ಷ್ಮಿ ಅಮ್ಮನವರಿಗೆ ಪಂಚಾಮೃತ ಅಭಿಷೇಕ, ಶ್ರೀ ಸೂಕ್ತ ಅಭಿಷೇಕ ತದನಂತರದಲ್ಲಿ ಬೆಳಿಗ್ಗೆ 6.30 ಕ್ಕೆ ವಿಪ್ರರಿಂದ ರುದ್ರಪಠಣ ಹಾಗೂ ಶಂಕರ ಭಗವತ್ಪಾದಾಚಾರ್ಯ ಸ್ತೋತ್ರಗಳ ಪಠಣ ಶಿವ ಅಷ್ಟೋತ್ತರ ಪಠಣ ತದನಂತರದಲ್ಲಿ ಮಹಾಮಂಗಳಾರತಿ ಹಾಗೂ ಸಾಯಂಕಾಲ ಗೋ ಪೂಜೆ, ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ಶ್ರೀಮಜ್ಜಗದ್ಗುರು ಶಂಕರಾಚಾರ್ಯರು ರಚಿಸಿದ ಸ್ತೋತ್ರಗಳು ವಿಶೇಷವಾಗಿ ಅರ್ಧನಾರೀಶ್ವರ ಹಾಗೂ ಶಿವ ತಾಂಡವ ಸ್ತೋತ್ರಗಳ ನೃತ್ಯ ಪ್ರದರ್ಶನವೂ ಹಾಗೂ ಇನ್ನಿತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಆದಕಾರಣ ಭಕ್ತ ಮಹಾಶಯರು ಎಲ್ಲಾ ಕಾರ್ಯಕ್ರಮಗಳಿಗೆ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

ವಿಶೇಷವಾಗಿ ಕೇದಾರದಲ್ಲಿ ನಡೆಯುವಂತಹ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಪುತ್ಥಳಿಯ ಉದ್ಘಾಟನಾ ಸಮಾರಂಭ ಪರದೆಯ ಮೇಲೆ ಲೈವ್ ಮೂಲಕವಾಗಿ ಕಾಣುವ ಒಂದು ವ್ಯವಸ್ಥೆಯನ್ನು ಜಿಲ್ಲಾಡಳಿತವು ಮಾಡಿರುವುದರಿಂದ ಸಂಸದರಾದ ಜಿ.ಎಂ. ಸಿದ್ದೇಶ್ವರ್, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕರು ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ಭಾಗವಹಿಸಲಿದ್ದಾರೆ. ಆದ್ದರಿಂದ ಸಾರ್ವಜನಿಕರು ಇದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್ ಲಕ್ಷ್ಮಿ, ಎಇಇ ಬಿರಾದಾರ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ. ಪಾಲಾಕ್ಷಿ, ರೇವಣಸಿದ್ದಪ್ಪ ಅಂಗಡಿ, ಜೋಯಿಸರಾದ ನಾರಾಯಣ್ ಜೋಯಿಸರು, ಚಿದಂಬರ ಜೋಯಿಸರು, ಹರಿಶಂಕರ್ ಜೋಯಿಸರು, ಅರ್ಚಕರಾದ ಕೃಷ್ಣಮೂರ್ತಿ, ಗುರುಪ್ರಸಾದ್ ಹಾಗು ಇತರರು ಹಾಜರಿದ್ದರು.

## ಗ್ರಾಹಕರ ರಕ್ಷಣಾ ಕಾಯ್ದೆಗೆ ಶಿಕ್ಷಣ : ಪರಿಶೀಲನೆ

ನವದೆಹಲಿ, ನ. 3 – ಶಿಕ್ಷಣವು ಗ್ರಾಹಕರ ರಕ್ಷಣಾ ಕಾಯ್ದೆಯಡಿ ಬರುವ ಸೇವೆಯೇ ಎಂಬ ಬಗ್ಗೆ ಪರಿಶೀಲಿಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಹಾಗೂ ಬಿ.ವಿ. ನಾಗರತ್ನ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ನಿರ್ಧರಿಸಿದ್ದು, ಇನ್ನೊಂದು ಪೀಠ ಇದೇ ರೀತಿಯ ಪ್ರಕರಣದ ವಿಚಾರಣೆ ನಡೆಸುತ್ತಿದ್ದು, ಆ ಪ್ರಕರಣದ ಜೊತೆ ವಿಷಯವನ್ನು ಸೇರಿಸುವಂತೆ ತಿಳಿಸಿದೆ.

ಶಿಕ್ಷಣ ಸಂಸ್ಥೆಗಳು ಗ್ರಾಹಕರ ರಕ್ಷಣಾ ಕಾಯ್ದೆ ವ್ಯಾಪ್ತಿಗೆ ಬರುವುದಿಲ್ಲ ಎಂದು ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಇತ್ಯರ್ಥ ಆಯೋಗ ತಿಳಿಸಿತ್ತು. ಇದನ್ನು ಪ್ರಶ್ನಿಸಿ ಲಖ್ನೌ ನಿವಾಸಿಯೊಬ್ಬರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಲಖ್ನೌದ ವ್ಯಕ್ತಿಯ ಮಗ ಶಾಲೆಯ ಬೇಸಿಗೆ ಶಿಬಿರಕ್ಕೆ 2007ರಲ್ಲಿ ಸೇರಿದ್ದ. ಇದರಲ್ಲಿ ಈಜೂ ಸಹ ಸೇರಿತ್ತು. ಇದಕ್ಕಾಗಿ 1,000 ರೂ.ಗಳ ಶುಲ್ಕ ವಿಧಿಸ ಲಾಗಿತ್ತು. ಈಜಿಗೆ ತೆರಳಿದ್ದ ಮಗ ಈಜುಗೊಳದಲ್ಲಿ ಮುಳುಗಿ ಸಾವನ್ನಪ್ಪಿದ್ದನು. ನಂತರ ತಂದೆ ರಾಜ್ಯ ಗ್ರಾಹಕರ ಆಯೋಗದ ಮೊರೆ ಹೋಗಿ, ಶಾಲೆಯ ಸೇವೆಯಲ್ಲಿನ ಲೋಪದಿಂದಾಗಿ ಸಾವು ಸಂಭವಿಸಿದೆ. ಇದಕ್ಕಾಗಿ ಪರಿಹಾರ ನೀಡಬೇಕೆಂದು ಕೋರಿದ್ದರು. ಆದರೆ, ದೂರು ನೀಡಿದ ವ್ಯಕ್ತಿ ಗ್ರಾಹಕರಲ್ಲ ಎಂದು ಆಯೋಗ ದೂರನ್ನು ತಳ್ಳಿ ಹಾಕಿತ್ತು.

ಶಿಕ್ಷಣದಲ್ಲಿ ಈಜಿನಂತಹ ಪಠ್ಯೇತರ ಚಟುವಟಿಕೆಗಳೂ ಸೇರಿವೆ. ಇದು ಗ್ರಾಹಕರ ರಕ್ಷಣಾ ಕಾಯ್ದೆಯಡಿ ಸೇವೆಯಲ್ಲ ಎಂದು ರಾಷ್ಟ್ರೀಯ ಆಯೋಗ ಸಹ ತಿಳಿಸಿತ್ತು.

## ಪೆಟ್ರೋಲ್, ಡೀಸೆಲ್ ತೆರಿಗೆ ಕಡಿತ

ನವದೆಹಲಿ, ನ. 3 – ಒತ್ತಡಕ್ಕೆ ಮಣಿದಿರುವ ಕೇಂದ್ರ ಸರ್ಕಾರ, ಪೆಟ್ರೋಲ್ ಹಾಗೂ ಡೀಸೆಲ್‌ಗಳ ಮೇಲಿನ ತೆರಿಗೆಯನ್ನು ಕ್ರಮವಾಗಿ 5 ರೂ. ಹಾಗೂ 10 ರೂ.ಗಳಷ್ಟು ಇಳಿಕೆ ಮಾಡಿದೆ. ಇದು ದಾಖಲೆ ಮಟ್ಟಕ್ಕೆ ತಲುಪಿರುವ ತೈಲ ಬೆಲೆ ಸ್ವಲ್ಪ ಇಳಿಕೆಯಾಗಲು ನೆರವಾಗಲಿದೆ.

ದೀಪಾವಳಿಯ ಮುನ್ನಾ ದಿನ ಕೇಂದ್ರ ಸರ್ಕಾರ ತೈಲ ಬೆಲೆ ಇಳಿಕೆಗೆ ಆದೇಶ ಹೊರಡಿಸಿದೆ. ನಾಳೆ ಗುರುವಾರದಿಂದ ಬೆಲೆ ಇಳಿಕೆ ಜಾರಿಗೆ ಬರಲಿದೆ.

ರೈತರು ತಮ್ಮ ಕಠಿಣ ಶ್ರಮದಿಂದ ಲಾಕ್‌ಡೌನ್ ಅವಧಿಯಲ್ಲೂ ಆರ್ಥಿಕ ಬೆಳವಣಿಗೆಯನ್ನು ಕಾಯ್ದುಕೊಂಡಿದ್ದಾರೆ. ತೆರಿಗೆ ಇಳಿಕೆ ಮಾಡಿರುವುದು ಮುಂಬರುವ ಹಿಂಗಾರಿನಲ್ಲಿ ಅವರಿಗೆ ನೆರವಾಗಲಿದೆ ಎಂದು ಕೇಂದ್ರ ಸರ್ಕಾರದ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಕಚ್ಚಾ ತೈಲದ ಬೆಲೆ ಜಾಗತಿಕ ಮಾರುಕಟ್ಟೆಯಲ್ಲಿ ಏರುಮುಖವಾಗಿತ್ತು. ಇದು ಪೆಟ್ರೋಲ್ ಹಾಗೂ ಡೀಸೆಲ್ ತೀವ್ರ ಬೆಲೆ ಏರಿಕೆಗೆ ಕಾರಣವಾಗಿತ್ತಲ್ಲದೇ, ಹಣದುಬ್ಬರದ ಮೇಲಿನ ಒತ್ತಡ ಹೆಚ್ಚಿಸಿತ್ತು.


## ಅಭಿನಂದನ್‌ಗೆ ಗ್ರೂಪ್ ಕ್ಯಾಪ್ಟನ್ ಸ್ಥಾನ

ನವದೆಹಲಿ, ನ. 3 – ವಿಂಗ್ ಕಮಾಂಡರ್ ಅಭಿನಂದನ್ ವರ್ತಮಾನ್ ಅವರಿಗೆ ಗ್ರೂಪ್ ಕ್ಯಾಪ್ಟನ್ ದರ್ಜೆ ನೀಡಲು ವಾಯುಪಡೆ ಅನುಮೋದಿಸಿದೆ. 2019ರ ಫೆಬ್ರವರಿಯಲ್ಲಿ ಪಾಕಿಸ್ತಾನದ ಜೊತೆ ನಡೆದ ವೈಮಾನಿಕ ಸಂಘರ್ಷದಲ್ಲಿ ಅಭಿನಂದನ್ ಪಾಕ್ ವಿಮಾನವನ್ನು ಹೊಡೆದುರುಳಿಸಿದ್ದರು. ಈ ಸಂದರ್ಭದಲ್ಲಿ ಅವರು ಮೂರು ದಿನ ಪಾಕ್ ವಶದಲ್ಲಿದ್ದರು. ಸೂಕ್ತ ಪ್ರಕ್ರಿಯೆ ಪೂರ್ಣಗೊಳಿಸಿದ ಕ್ಯಾಪ್ಟನ್ ಸ್ಥಾನಕ್ಕೆ ಬರಲಿದ್ದಾರೆ ಎನ್ನಲಾಗಿದೆ.

# ವಂಚನೆ, ಚೀಟಿ ವ್ಯವಹಾರಗಳ ಬಗ್ಗೆ ಎಚ್ಚರವಿರಲಿ: ಡಿವೈಎಸ್ಪಿ ತಾಮ್ರಧ್ವಜ

ದಾವಣಗೆರೆ, ನ.3- ನಗರದಲ್ಲಿ ಇತ್ತೀಚಿಗೆ ಹೆಚ್ಚುತ್ತಿರುವ ಆನ್‌ಲೈನ್ ವಂಚನೆ, ಅಪರಾಧ ಪ್ರಕರಣಗಳ ತಡೆ ಹಾಗೂ ಸಾರ್ವಜನಿಕರ ರಕ್ಷಣೆಗೆ ಪೊಲೀಸ್ ಇಲಾಖೆ ಆಧುನಿಕ ತಂತ್ರಜ್ಞಾನದ ಮುಖೇನ ಜನಸ್ನೇಹಿಯಾಗಿ ಜನಸೇವೆಗೆ ಕಾರ್ಯಪ್ರವೃತ್ತವಾಗಿದೆ. ಈ ವಿಚಾರದಲ್ಲಿ ಸಾರ್ವಜನಿಕರ ಸಹಭಾಗಿತ್ವ, ಜಾಗರೂಕತೆಯೂ ಪ್ರಮುಖ ಪಾತ್ರ ವಹಿಸಲಿದೆ ಎಂದು ನಗರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ತಿಳಿಸಿದರು.

ಅವರು, ಇಂದು ನಗರದ ಶಿವಯೋಗಿ ಮಂದಿರದಲ್ಲಿ ಸಂಜೆ ಬಸವ ಕೇಂದ್ರ, ಮುರುಘ ರಾಜೇಂದ್ರ ವಿರಕ್ತ ಮಠ, ಜಗದ್ಗುರು ಮುರುಘ ರಾಜೇಂದ್ರ ಶಿವಯೋಗ ಆಶ್ರಮ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಶರಣ ಸಂಗಮದಲ್ಲಿ ಜನಸಾಮಾನ್ಯರಿಗಾಗಿ ಕಾನೂನು ಅರಿವು ವಿಷಯ ಕುರಿತ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ನಗರದಲ್ಲಿ ಆನ್‌ಲೈನ್ ವಂಚನೆ, ಸರಗಳ್ಳತನ, ಬೈಕ್‌ಗಳ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿವೆ. ಬೆಳಗ್ಗೆ ರಂಗೋಲಿ ಹಾಕುವ ಸಮಯದಲ್ಲಿ ಮಹಿಳೆಯರ ಸರಗಳ್ಳತನ ಪ್ರಕರಣಗಳು ನಡೆಯುತ್ತಿವೆ. ಈ ರೀತಿಯ ಸರಗಳ್ಳತನ ಮಾಡುವವರು ಹೊರ ರಾಜ್ಯದವರಾಗಿದ್ದು, ನಾಗರಿಕರು ಎಚ್ಚರಿಕೆಯಿಂದ ಇರಬೇಕು ಎಂದು ಕಿವಿಮಾತು ಹೇಳಿದರು.

ಚನ್ನಗಿರಿ ತಾಲ್ಲೂಕಿನಲ್ಲಿ ಕಳ್ಳರನ್ನು ಬಂಧಿಸಲು ಮುಂದಾದಾಗ ಪೊಲೀಸರ ಮೇಲೆ ಹಲ್ಲೆ ನಡೆಸಿದ ಘಟನೆ ಇದೆ. ಸರಗಳ್ಳತನವಾದ 5-10 ನಿಮಿಷಗಳಲ್ಲಿ ಪೊಲೀಸರಿಗೆ ಮಾಹಿತಿ ನೀಡಿದ್ದಲ್ಲಿ ಅವರನ್ನು ಬಂಧಿಸಲು ಅನುಕೂಲ ಆಗುತ್ತದೆ. ಬ್ಯಾಂಕ್ ಅಧಿಕಾರಿಗಳ ಸೋಗಿನಲ್ಲಿ ಸಾರ್ವಜನಿಕರಿಂದ ಬ್ಯಾಂಕ್ ಖಾತೆಯ ಮಾಹಿತಿ ಪಡೆದು ಹಣ ದೋಚಲಾಗುತ್ತಿದೆ. ಲಸಿಕೆ ಹಾಕುತ್ತೇವೆ ಎಂಬ ನೆಪದಲ್ಲಿ ಓಟಿಪಿ ಸಂಖ್ಯೆ ಪಡೆದು ಹಣ ಕದಿಯಲಾಗುತ್ತಿದೆ. ಹೀಗೆ ನಾನಾ ವಿಧಾನಗಳ ಮೂಲಕ ವಂಚಿಸಲಾಗುತ್ತಿದೆ. ಅಪರಿಚಿತರು ಬ್ಯಾಂಕ್‌ನ ಖಾತೆ ಮಾಹಿತಿ, ಯಾವುದೇ ಓಟಿಪಿ ಕೇಳಿದಾಗ ಕೊಡದೇ ಎಚ್ಚರ ವಹಿಸಬೇಕು. ಬ್ಯಾಂಕ್ ಹೆಸರು ಹೇಳಿ ಕರೆ ಮಾಡಿದರೂ ಕಿವಿಗೊಡಬಾರದು ಎಂದು ಹೇಳಿದರು.

**ಖಾಸಗಿ ಚೀಟಿ ವ್ಯವಹಾರಕ್ಕೆ ಮನಸೋಲದಿರಿ:** ಖಾಸಗಿ ಚೀಟಿ ವಹಿವಾಟಿಗೆ ಜನರು ಮನಸೋಲಬಾರದು. ಬಡ್ಡಿ, ಚಕ್ರಬಡ್ಡಿ ಆಸೆ ತೋರಿಸಿ ಕೆಲವರು ಹಣ ಎತ್ತಿಕೊಂಡು ಓಡಿಹೋದ ಘಟನೆಯೂ ಇವೆ. ಆದ್ದರಿಂದ ಖಾಸಗಿಯಾಗಿ ಯಾವುದೇ ಚೀಟಿ ವ್ಯವಹಾರ ಮಾಡದೇ, ಸರ್ಕಾರದ ಅಧೀನದ ಸಂಸ್ಥೆಗಳಲ್ಲಿ ಹಣವನ್ನು ಹೂಡುವುದರಿಂದ ಮೋಸ ಆಗುವುದಿಲ್ಲ. ಹಾಗೇನಾದರೂ ಮೀಟರ್ ಬಡ್ಡಿ, ಚಕ್ರಬಡ್ಡಿ ವ್ಯವಹಾರ ಕಂಡು ಬಂದರೆ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಲಾಗುವುದು ಎಂದು ನರಸಿಂಹ ವಿ. ತಾಮ್ರಧ್ವಜ ಎಚ್ಚರಿಸಿದರು.

ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಸಮಾಜದ ಪ್ರತಿಯೊಬ್ಬರೂ ಕಾನೂನಿನ ಅರಿವು ಹೊಂದಬೇಕು. ಯಾರಿಗೆ ಕಾನೂನಿನ ಜ್ಞಾನವಿದೆಯೋ ವಂಚನೆಗೆ ಒಳಗಾಗುವುದಿಲ್ಲ. ಕಾನೂನು ತಿಳಿದಿದ್ದಲ್ಲಿ ತಮ್ಮ ಜೀವನ ಉತ್ತಮವಾಗಿ ನಡೆದುಕೊಂಡು ಹೋಗಲು ಕಾರಣ ಆಗುತ್ತದೆ. ದೇಶದಲ್ಲಿ ಶಾಂತಿ ನೆಲೆಸಲು ಕಾನೂನು ಪಾಲನೆ ಅಗತ್ಯ ಎಂದರು.

ಆರ್‌ಎಲ್ ಕಾನೂನು ಕಾಲೇಜಿನ ಪ್ರಾಚಾರ್ಯ ಡಾ. ಎಂ. ಸೋಮಶೇಖರಪ್ಪ ಉಪನ್ಯಾಸ ನೀಡಿದರು. ಸಹಾಯಕ ಪ್ರಾಧ್ಯಾಪಕರಾದ ಬಿ.ಪಿ. ಬಸವನಗೌಡ ಪಾಟೀಲ್, ಟಿ. ವಿದ್ಯಾಧರ ವೇದವರ್ಮ, ಕಾನೂನು ನೆರವು ಘಟಕದ ವಿದ್ಯಾರ್ಥಿ ಸಂಚಾಲಕ ಕೆ. ಸಿದ್ಧನಗೌಡ ಮತ್ತಿತರರಿದ್ದರು. ಬಸವ ಕಲಾ ಲೋಕದಲ್ಲಿ ವಚನ ಗಾಯನ. ಶರಣಬಸವ ಸ್ವಾಗತಿಸಿದರು. ರೋಷನ್ ಕಾರ್ಯಕ್ರಮ ನಿರೂಪಿಸಿದರು. ಕುಂಟೋಜಿ ಚನ್ನಪ್ಪ ವಂದಿಸಿದರು.




**ಶ್ರೀ ನರೇಂದ್ರ ಮೋದಿ**
ಸನ್ಮಾನ್ಯ ಪ್ರಧಾನಮಂತ್ರಿಗಳು

**ಶ್ರೀ ಬಸವರಾಜ ಎಸ್. ಬೊಮ್ಮಾಯಿ**
ಸನ್ಮಾನ್ಯ ಮುಖ್ಯಮಂತ್ರಿಗಳು

# ಭರವಸೆಯ ಮುನ್ನುಡಿ. ಯಶಸ್ವೀ 100 ದಿನಗಳು.

## ನವ ಭಾರತಕ್ಕಾಗಿ ನವ ಕರ್ನಾಟಕ

### ಸನ್ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಅವರ ದೂರದರ್ಶಿತ್ವದಲ್ಲಿ ರಾಜ್ಯದ ಅಭಿವೃದ್ಧಿಗೆ ಹೊಸಬೆಳಕು

#### ಜನಸೇವಕ ಯೋಜನೆ

- ನಾಗರೀಕರಿಗೆ ಸಮಯದ ಉಳಿತಾಯಕ್ಕೆ ಅನುಕೂಲವಾಗುವಂತೆ ಮತ್ತು ವಿಶೇಷವಾಗಿ ಹಿರಿಯ ನಾಗರೀಕರಿಗೆ ಮತ್ತು ದಿವ್ಯಾಂಗರಿಗೆ ನೆರವಾಗಲು ಐವತ್ತೆಂಟು ಅಧಿಕ ನಾಗರೀಕ ಸೇವೆಗಳನ್ನು ಮನೆಬಾಗಿಲಿಗೆ ಒದಗಿಸಲು "ಜನಸೇವಕ" ಯೋಜನೆ ಜಾರಿ.
- ಜನಸೇವಕ ಆಪ್, ವೆಬ್‌ಸೈಟ್ www.janasevaka.karnataka.gov.in ಅಥವಾ ದೂರವಾಣಿ 080-4455 4455 ಗಳ ಮೂಲಕ ಅಗತ್ಯವಾದ ಸೇವೆಗಳಿಗೆ ಅರ್ಜಿಗಳನ್ನು ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಸಲ್ಲಿಸಬಹುದು. ನೇಮಕಗೊಂಡ ಪ್ರತಿನಿಧಿಗಳು ಮನೆಬಾಗಿಲಿಗೆ ಬಂದು ಅಗತ್ಯ ದಾಖಲೆಗಳನ್ನು ಪಡೆದು ಸೇವಾಸಿಂಧು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುತ್ತಾರೆ. ಬಳಿಕ ಸೌಲಭ್ಯವನ್ನು ಮನೆಬಾಗಿಲಿಗೆ ತಲುಪಿಸುತ್ತಾರೆ.

**ರಾಜ್ಯದಲ್ಲಿ 3.85 ಲಕ್ಷ ಎಪಿಎಲ್ ಮತ್ತು ಬಿಪಿಎಲ್ ಪಡಿತರ ಚೀಟಿಗಳನ್ನು ನೀಡಲು ಸರ್ಕಾರ ನಿರ್ಧರಿಸಿದೆ.**

#### ಗ್ರಾಮ ಒನ್ ಯೋಜನೆ

- ಜನವರಿ 26, 2022ರ ವೇಳೆಗೆ 8791 ಗ್ರಾಮ ಒನ್ ಕೇಂದ್ರಗಳಲ್ಲಿ ಸುಮಾರು 100 ನಾಗರೀಕ ಸೇವೆಗಳನ್ನು ಒದಗಿಸಲು ಸೂಕ್ತ ಕ್ರಮ

#### ಜನಸ್ಪಂದನ - ಸಮಗ್ರ ಸಾರ್ವಜನಿಕ ಕುಂದು ಕೊರತೆ ನಿವಾರಣಾ ವ್ಯವಸ್ಥೆ

- ಸರ್ಕಾರದ 33 ಇಲಾಖೆಗಳ ವಿವಿಧ ಯೋಜನೆ / ಸೇವೆಗಳಿಗೆ ಸಂಬಂಧಿಸಿದಂತೆ ಕುಂದು ಕೊರತೆಗಳ ನಿವಾರಣೆಗೆ ಕ್ರಮ
- ಪೋರ್ಟಲ್ / ಮೊಬೈಲ್ ಆಪ್ / ಸಹಾಯವಾಣಿ 1902 ಗಳ ಮೂಲಕ ಕುಂದು ಕೊರತೆಗಳ ನೋಂದಣಿ
- ನಾಗರೀಕರಿಗೆ ಕುಂದು ಕೊರತೆಯ ನೋಂದಣಿಯನ್ನು ಎಸ್‌ಎಂಎಸ್ ಮೂಲಕ ಖಾತ್ರಿಪಡಿಸಲಾಗುತ್ತದೆ

#### ಸಾರಿಗೆ

- ಸಾರಿಗೆ ಇಲಾಖೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯ ಚಟುವಟಿಕೆಗಳಿಗೆ ಸಂಬಂಧಿಸಿದ 30 ಸೇವೆಗಳನ್ನು - ಸಾರಥಿ ಯೋಜನೆಯ ಅಡಿಯಲ್ಲಿ 11 ಸೇವೆಗಳು ಮತ್ತು ವಾಹನ ಯೋಜನೆಯ ಅಡಿಯಲ್ಲಿ 19 ಸೇವೆಗಳನ್ನು ಸಂಪರ್ಕ ರಹಿತವಾಗಿ / ಆನ್‌ಲೈನ್ ಮಾಡಲಾಗಿದೆ

#### ಮುಖ್ಯಮಂತ್ರಿಗಳ ಡ್ಯಾಷ್‌ಬೋರ್ಡ್

- ಪ್ರಧಾನ ಮಂತ್ರಿಗಳ ಡ್ಯಾಷ್‌ಬೋರ್ಡ್ ಮಾದರಿಯಲ್ಲಿಯೇ ರಾಜ್ಯದಲ್ಲಿ ಮುಖ್ಯಮಂತ್ರಿಗಳ ಡ್ಯಾಷ್‌ಬೋರ್ಡ್ ಪ್ರಾರಂಭಿಸಲಾಗಿದೆ ವಿವಿಧ ಇಲಾಖೆಗಳ ಪ್ರಗತಿಯ ಕ್ಷಿಪ್ರ ನೋಟ ಇಲ್ಲಿ ದೊರೆಯಲಿದೆ

**ರಾಜ್ಯದ 31ನೇ ಹೊಸ ಜಿಲ್ಲೆಯಾಗಿ ವಿಜಯನಗರ ರಚನೆ**

**ಮುಂಬೈ ಕರ್ನಾಟಕ ಪ್ರದೇಶವನ್ನು "ಕಿತ್ತೂರು ಕರ್ನಾಟಕ" ಎಂದು ಮರು ನಾಮಕರಣ ಮಾಡಲು ಸರ್ಕಾರ ನಿರ್ಧರಿಸಿದೆ.**

**ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಸರ್ಕಾರ ಕಟಿಬದ್ಧವಾಗಿದ್ದು ಈಗಿರುವ ಅನುದಾನದ ಜೊತೆಗೆ ರೂ. 1500 ಕೋಟಿ ಅನುದಾನ ನೀಡಲು ಸರ್ಕಾರ ನಿರ್ಧರಿಸಿದೆ.**

**ಕರ್ನಾಟಕ ಪೋಲಿಸ್ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಆನ್‌ಲೈನ್ ಜೂಜು ಮತ್ತು ಬೆಟ್ಟಿಂಗ್‌ನ್ನು ಶಿಕ್ಷಾರ್ಹ ಅಪರಾಧ ಎಂದು ಘೋಷಿಸಲಾಗಿರುವುದರಿಂದ ಸಾವಿರಾರು ಬಡ ಕುಟುಂಬಗಳು ಸಂಕಷ್ಟದಿಂದ ಪಾರು**

#### ಐಟಿಐ ಶಿಕ್ಷಣ

- ರಾಜ್ಯದಲ್ಲಿ 155 ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು (ಐಟಿಐ) ಸ್ಥಾಪಿಸಿ ಯುವಕರಲ್ಲಿ ಕೌಶಲ್ಯಾಭಿವೃದ್ಧಿಗೆ ವಿಶೇಷ ಪ್ರೋತ್ಸಾಹ

#### ಮುಖ್ಯಮಂತ್ರಿ ವಿದ್ಯಾನಿಧಿ

- ರೈತರ ಮಕ್ಕಳ ಶಿಕ್ಷಣಕ್ಕೆ ವಿಶೇಷ ಕೊಡುಗೆ "ಮುಖ್ಯಮಂತ್ರಿ ರೈತ ವಿದ್ಯಾ ನಿಧಿ" ಯೋಜನೆ ಜಾರಿ
- ಈ ಯೋಜನೆಗೆ ಒಂದು ಸಾವಿರ ಕೋಟಿ ಮೀಸಲು ಇದರಿಂದ 18 ಲಕ್ಷ ರೈತ ಮಕ್ಕಳಿಗೆ ಲಾಭ

#### ಉನ್ನತ ಶಿಕ್ಷಣ

- ರಾಷ್ಟ್ರೀಯ ಶಿಕ್ಷಣ ನೀತಿ (NEP) ಯನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ
- ರಾಷ್ಟ್ರೀಯ ಶಿಕ್ಷಣ ನೀತಿ - 2020 ಅನುಸಾರ ಕರ್ನಾಟಕದಲ್ಲಿ ಕನ್ನಡದಲ್ಲಿ ಇಂಜಿನಿಯರಿಂಗ್ ಪಠ್ಯಕ್ರಮ
- ಇಂಜಿನಿಯರಿಂಗ್ ಕಾಲೇಜುಗಳಲ್ಲಿ ನಾಲ್ಕು ವರ್ಷ ಬಿ.ಎಸ್ಸಿ (ಫಾರ್ಮಾ) ಕೋರ್ಸ್ ಗೆ ಚಾಲನೆ

#### ಸಾಮಾಜಿಕ ಸಬಲೀಕರಣ

- ಸಂಧ್ಯಾ ಸುರಕ್ಷಾ ಯೋಜನೆಯ ಪಿಂಚಣಿ ರೂ. 1200 ಗಳಿಗೆ ಹೆಚ್ಚಳ ಯೋಜನೆಯ ಫಲಾನುಭವಿಗಳು 35.98 ಲಕ್ಷ
- ವಿಧವಾ ವೇತನ ರೂ. 800ಕ್ಕೆ ಏರಿಕೆ, ಯೋಜನೆಯ ಫಲಾನುಭವಿಗಳು 17.25 ಲಕ್ಷ
- ದಿವ್ಯಾಂಗಿಗಳ ಮಾಸಿಕ ವೇತನ ರೂ. 800ಕ್ಕೆ ಏರಿಕೆ. ಯೋಜನೆಯ ಫಲಾನುಭವಿಗಳು 3.66 ಲಕ್ಷ

#### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

- 2022 ರ ಜನವರಿ 26ರಿಂದ ಐದು ಜಿಲ್ಲೆಗಳಲ್ಲಿ "ಗ್ರಾಮ ಸೇವಾ ಯೋಜನೆ"ಗೆ ಚಾಲನೆ
- ಗ್ರಾಮ ಪಂಚಾಯಿತಿ ಹಂತದಲ್ಲಿ ನಾಗರೀಕ ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸುವ "ಗ್ರಾಮ ಸೇವಾ ಯೋಜನೆ" ಪ್ರಾಯೋಗಿಕವಾಗಿ ಜಾರಿ
- ಈ ಯೋಜನೆಯಡಿ 750 ಗ್ರಾಮ ಪಂಚಾಯಿತಿಗಳ ಸರ್ವಾಂಗೀಣ ಅಭಿವೃದ್ಧಿಯ ಗುರಿ

#### ಆರೋಗ್ಯ ಮತ್ತು ಕುಟುಂಬ ಕಲ್ಯಾಣ

- ಕೋವಿಡ್-19 ರ ಉತ್ತಮ ನಿರ್ವಹಣೆಗಾಗಿ ಇಂಡಿಯಾ ಟುಡೇ ಹೆಲ್ತ್‌ಗಿರಿ ಪ್ರಶಸ್ತಿ
- ರಾಜ್ಯದಲ್ಲಿ 250 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮೇಲ್ದರ್ಜೆಗೆ
- ರಾಜ್ಯದಲ್ಲಿ ದಾಖಲೆ ಪ್ರಮಾಣದಲ್ಲಿ ಕೋವಿಡ್ ಪ್ರತಿರೋಧ ಲಸಿಕೆ ನೀಡಿಕೆ

#### ಜಲಸಂಪನ್ಮೂಲ

- ಕೃಷ್ಣಾ ಮೇಲ್ದಂಡೆ ಯೋಜನೆಯ ಭೂ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ 20 ಗ್ರಾಮಗಳ ಸ್ಥಳಾಂತರಕ್ಕೆ ರೂ. 2000 ಕೋಟಿ ಅನುದಾನ ಒದಗಿಸಲು ನಿರ್ಧಾರ
- ಕಾವೇರಿ ಕೊಳ್ಳದ ಕೃಷ್ಣರಾಜ ಸಾಗರ ಅಣೆಕಟ್ಟು ಹಾಗೂ ವಿಶ್ವೇಶ್ವರಯ್ಯ ನಾಲೆಯ ಸಂಪೂರ್ಣ ಅಧುನೀಕರಣಕ್ಕೆ ಕ್ರಮ. ಈಗಾಗಲೇ ರೂ. 500 ಕೋಟಿ ಬಿಡುಗಡೆ, 1600 ಕಿ.ಮೀ ಕಾಮಗಾರಿಗಳ ಪ್ರಸ್ತಾವನೆಯ ಅನುಮೋದನೆಗೆ ನಿರ್ಧಾರ
- ಎತ್ತಿನಹೊಳೆ ಯೋಜನೆಯ ತ್ವರಿತ ಅನುಷ್ಠಾನಕ್ಕೆ ತೀರ್ಮಾನ

**ಪರಿಶಿಷ್ಟ ವರ್ಗಗಳ ಅಭ್ಯುದಯಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ**

**ಸರ್ಕಾರದ ವತಿಯಿಂದ ಸಂಗೊಳ್ಳಿ ರಾಯಣ್ಣ ಜಯಂತಿ ಆಚರಣೆಗೆ ನಿರ್ಧಾರ**

#### ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಮೃತ ಯೋಜನೆಗಳು

- ಅಮೃತ ಗ್ರಾಮ ಪಂಚಾಯಿತಿ • ಅಮೃತ ರೈತ ಉತ್ಪಾದಕ ಸಂಸ್ಥೆಗಳು
- ಅಮೃತ ಗ್ರಾಮೀಣ ವಸತಿ ಯೋಜನೆ • ಅಮೃತ ನಿರ್ಮಲ ನಗರ
- ಅಮೃತ ಶಾಲಾ ಸೌಲಭ್ಯ ಯೋಜನೆ • ಅಮೃತ ಅಂಗನವಾಡಿ ಕೇಂದ್ರಗಳು
- ಅಮೃತ ಸ್ವಸಹಾಯ ಕಿರು ಉದ್ದಿಮೆಗಳು • ಅಮೃತ ಸಮುದಾಯ ಅಭಿವೃದ್ಧಿ ಯೋಜನೆ
- ಅಮೃತ ಆರೋಗ್ಯ ಮೂಲಸೌಕರ್ಯ ಉನ್ನತೀಕರಣ ಯೋಜನೆ
- ಅಮೃತ ಕೌಶಲ್ಯ ತರಬೇತಿ ಯೋಜನೆ • ಅಮೃತ ಕ್ರೀಡಾ ದತ್ತು ಯೋಜನೆ
- ಅಮೃತ ನಗರೋತ್ಥಾನ ಯೋಜನೆ

**ಮುಂದಿನ ವರ್ಷದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯ ನಗದು ಪುರಸ್ಕಾರದ ಮೊತ್ತ ಐದು ಲಕ್ಷ ರೂ ಗಳಿಗೆ ಹೆಚ್ಚಿಸಲು ನಿರ್ಧಾರ**

**ಪ್ರಶಸ್ತಿಗಳಿಗಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಸರ್ಕಾರದ ಆಯ್ಕೆ ಸಮಿತಿಯಿಂದಲೇ ರಾಜ್ಯೋತ್ಸವ ಪ್ರಶಸ್ತಿಗಳ ಆಯ್ಕೆಗೆ ಕ್ರಮ**














## ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳು

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು".
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ


**ಕರ್ನಾಟಕ ವಾರ್ತೆ**
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಮೌಲ್ಯಗಳ ದಾರಿ ಹಿಡಿದರೆ ಸಂತೃಪ್ತ ಜೀವನ ಸಾಧ್ಯ

ಸಾಣೇಹಳ್ಳಿ, ನ.3- ಅಪಮೌಲ್ಯಗಳ ದಾರಿಯನ್ನು ಬಿಟ್ಟು ಮೌಲ್ಯಗಳ ದಾರಿ ಹಿಡಿದರೆ ಸಂತೃಪ್ತ ಜೀವನ ನಡೆಸಲು ಸಾಧ್ಯವಿದೆ. ತಾವೂ ಬದುಕಿ ಇನ್ನೊಬ್ಬರನ್ನು ಬದುಕಲು ಬಿಡುವುದೇ ಮೌಲ್ಯ. ಆದರೆ ಮೌಲ್ಯಯುತ ಬದುಕು ಕಟ್ಟಿಕೊಳ್ಳುವಲ್ಲಿ ಸೋಲುತ್ತಿದ್ದೇವೆ ಎಂದು ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಸಾಣೇಹಳ್ಳಿಯಲ್ಲಿ ನಾಟಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ 'ಪ್ರಾರ್ಥನೆ, ಧ್ಯಾನ, ಮೌನ' ಚಿಂತನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಶರಣರು ತಮ್ಮ ವಚನಗಳಲ್ಲಿ ಕಣ್ಣಿಗೆ ಕಾಣುವ ಉದಾಹರಣೆಗಳ ಮೂಲಕ ಮೌಲ್ಯಗಳನ್ನು ವಿಭಿನ್ನವಾಗಿ ಸಾರಿದ್ದಾರೆ. ಪೂಜೆಗೆ ಪುಷ್ಪ, ನೀರು, ಧೂಪ, ದೀಪ ಮುಂತಾದವುಗಳನ್ನು ಬಳಸುವುದಕ್ಕಿಂತ, ಶುದ್ಧ ಮನಸ್ಸಿನಿಂದ ಮಾಡುವ ಪ್ರಾರ್ಥನೆ ದೇವರಿಗೆ ಮುಟ್ಟುತ್ತದೆ. ಮನುಷ್ಯನ ಮೂಲ ಉದ್ದೇಶ ಮಾನವತ್ವದಿಂದ ಸಾಗಿ ದೈವತ್ವವನ್ನು ರೂಢಿಸಿಕೊಳ್ಳುವುದು.



ಪಂಡಿತಾರಾಧ್ಯಶ್ರೀ

ಅದಕ್ಕೆ ಮಾನವೀಯ ಮೌಲ್ಯಗಳೇ ಮೆಟ್ಟಿಲುಗಳಿದ್ದಂತೆ ಎಂದರು.

ಮಾನವ ಸ್ವಾರ್ಥದ ಗೋಡೆಯನ್ನು ನಿರ್ಮಿಸಿಕೊಂಡಿದ್ದಾನೆ. ಅಧಿಕಾರ, ಅಂತಸ್ತು, ಪದವಿ, ಪ್ರತಿಷ್ಠೆಗಳನ್ನೇ ಮೌಲ್ಯ ಎಂದು ತಿಳಿದು, ವ್ಯಾಮೋಹಕ್ಕೆ ಒಳಗಾಗಿದ್ದಾನೆ. ಅಂತಹ ಗೋಡೆಯಿಂದ ಹೊರಬರುವುದೇ ನಿಜವಾದ ಮೌಲ್ಯ ಎಂದು ಹೇಳಿದರು. ಪ್ರಸ್ತುತ ರಾಜಕಾರಣಿಗಳು, ಸ್ವಾಮಿಗಳು, ದೊಡ್ಡ ದೊಡ್ಡ ವ್ಯಕ್ತಿಗಳಿಗೆ ಮೌಲ್ಯಗಳ ಅಗತ್ಯವಿದೆ ಎಂದರು.

'ಮಾನವೀಯ ಮೌಲ್ಯಗಳು' ಕುರಿತು ಮಾತನಾಡಿದ ಭಗೀರಥ ಪೀಠದ ಡಾ. ಪುರುಷೋತ್ತಮಾನಂದಪುರಿ ಸ್ವಾಮೀಜಿ ಅವರು, ವ್ಯಕ್ತಿಯ ವ್ಯಕ್ತಿತ್ವ ನಿಜವಾದ ಸಂಪತ್ತು. ವ್ಯಕ್ತಿತ್ವ ಸರಿಯಿದ್ದರೆ ಮಾತ್ರ ಆತನಿಗೆ ಬೆಲೆ ಬರುವುದು. ಸತ್ಯ, ಧರ್ಮ, ನ್ಯಾಯವನ್ನು ಬದುಕಿನಲ್ಲಿ ಅಳವಡಿಸಿಕೊಂಡು ನಡೆಯುವವರೇ ಮಾನವರು ಎಂದು ಹೇಳಿದರು.

ಜ್ಯೋತಿ ಮತ್ತು ಹೆಚ್.ಎಸ್. ನಾಗರಾಜ್ ಸಂಗಡಿಗರು ಸಾಮೂಹಿಕ ಪ್ರಾರ್ಥನೆ ನಡೆಸಿಕೊಟ್ಟರು. ಹಿಮಶ್ರೀ ನಿರೂಪಿಸಿದರು. ವಿದ್ಯಾರ್ಥಿಗಳು, ನೌಕರರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಸಮರ್ಥನಂ ಸಂಸ್ಥೆಯಿಂದ 250 ವಿಕಲಚೇತನರಿಗೆ ಫುಡ್‌ಕಿಟ್ ವಿತರಣೆ

ದಾವಣಗೆರೆ, ನ.3- ನಗರದ ರೋಟರಿ ಬಾಲಭವನದಲ್ಲಿ ಬೆಂಗಳೂರಿನ ಸಮರ್ಥನಂ ಸಂಸ್ಥೆ, ಕರ್ನಾಟಕ ರಾಜ್ಯ ವಿಕಲಚೇತನರ ಆರ್‌ಪಿಡಿ ಟಾಸ್ಕ್‌ಫೋರ್ಸ್ ಸಂಘ-ಸಂಸ್ಥೆಗಳ ಒಕ್ಕೂಟದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 250 ವಿಕಲಚೇತನರಿಗೆ ಫುಡ್‌ಕಿಟ್ ವಿತರಿಸಲಾಯಿತು.



ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ವಿಕಲಚೇತನರು ಕೊರೊನಾ ಲಸಿಕೆ ಹಾಕಿಸಿಕೊಳ್ಳದಿರುವವರು ಮಹಾನಗರ ಪಾಲಿಕೆಗೆ ಮಾಹಿತಿ ನೀಡಿದರೆ ಅಂತವರ ಮನೆ ಬಾಗಿಲಿಗೆ ಹೋಗಿ ಲಸಿಕೆ ಹಾಕುವ ವ್ಯವಸ್ಥೆ ಮಾಡಲಾಗುವುದು ಎಂದರು.

ಲಸಿಕಾ ಕೇಂದ್ರಕ್ಕೆ ಬರಲು ಸಾಧ್ಯವಾಗದ ವಿಕಲಚೇತನರು ಮಾಹಿತಿ ನೀಡಬೇಕು. ಅವರಿಗೆ ಪಾಲಿಕೆಯಿಂದ ಲಸಿಕೆ ಹಾಕಲಾಗುವುದು. ಪಾಲಿಕೆಯಿಂದ ಸಿಗಬಹುದಾದ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ವೀರೇಶ್ ತಿಳಿಸಿದರು.

ಪ್ರತಿಯೊಬ್ಬ ವಿಕಲಚೇತನರಲ್ಲೂ ವಿಶೇಷ ಪ್ರತಿಭೆ ಅಡಗಿರುತ್ತದೆ. ಅದನ್ನು ಹೊರ ಹಾಕುವ ಪ್ರಯತ್ನವನ್ನು ಮಾಡಬೇಕು ಎಂದು ಸಲಹೆ ನೀಡಿದರು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಧಿಕಾರಿ ಕೆ.ಕೆ. ಪ್ರಕಾಶ್ ಮಾತನಾಡಿ, ವಿಕಲಚೇತನರ ಬಳಿ ಅಂಗವಿಕಲರ ಪ್ರಮಾಣಪತ್ರವಿದ್ದರೂ, ಯುಡಿಐಡಿ ಕಾರ್ಡ್ ಇಲ್ಲದಿದ್ದರೆ, ಸರ್ಕಾರ ನಿಮ್ಮನ್ನು ಅಂಗವಿಕಲರು ಎಂದು ಪರಿಗಣಿಸುವುದಿಲ್ಲ. ಆದ್ದರಿಂದ ಕಡ್ಡಾಯವಾಗಿ ಕಾರ್ಡ್ ಮಾಡಿಸಿಕೊಳ್ಳಿ ಎಂದು ಮನವಿ ಮಾಡಿದರು.

ಒಕ್ಕೂಟದ ಕೆ.ಎಂ. ನಟರಾಜ್, ರಾಜ್ಯ ಉಪಾಧ್ಯಕ್ಷೆ ಎಂ. ವಿಜಯಲಕ್ಷ್ಮಿ, ಸಮರ್ಥನಂ ಸಂಸ್ಥೆಯ ದೇವರಾಜ್, ಗೋಪಾಲಪ್ಪ, ವರದಿಗಾರರ ಕೂಟದ ಪಿಆರ್‌ಓ ಡಿ. ರಂಗನಾಥರಾವ್ ಮತ್ತಿತರರು ಉಪಸ್ಥಿತರಿದ್ದರು.

ಸಹನಾ ಪ್ರಾರ್ಥಿಸಿದರು. ರಾಘವೇಂದ್ರ ಸ್ವಾಗತಿಸಿದರು. ಮಂಜುಳಾ ಹಿರೇಮಠ ನಿರೂಪಿಸಿದರು.

## ಕೋಳಿವಾಡ ಜನ್ಮದಿನ : ಆನ್‌ಲೈನ್ ತರಬೇತಿ ಶಿಬಿರ

ರಾಣೇಬೆನ್ನೂರು, ನ.3- ಮಾಜಿ ಸಚಿವ ಕೆ.ಬಿ. ಕೋಳಿವಾಡ ಇವರ 78ನೇ ಹುಟ್ಟುಹಬ್ಬದ ಪ್ರಯುಕ್ತ ಅವರ ಸುಪುತ್ರ ಪಿ.ಕೆ.ಕೆ. ಇನಿಷಿಯೇಟಿವ್‌ನ ಅಧ್ಯಕ್ಷ ಪ್ರಕಾಶ್ ಕೋಳಿವಾಡ ಅವರು ಸ್ಪರ್ಧಾತ್ಮಕ ಪರೀಕ್ಷೆಗಳ ವಿದ್ಯಾರ್ಥಿಗಳಿಗೆ ವಿಶೇಷ ಕೊಡುಗೆ ನೀಡಿದ್ದಾರೆ. ಇಲ್ಲಿನ ಪಿ.ಕೆ.ಕೆ. ಇನಿಷಿಯೇಟಿವ್ಸ್‌ನಿಂದ ಇಂಟಿಗ್ರೇಟೆಡ್ ಐಎಎಸ್ ಅಕಾಡೆಮಿ ತರಬೇತಿ ಕೇಂದ್ರದಿಂದ ತಾಲ್ಲೂಕಿನ ಪದವಿ ವಿದ್ಯಾರ್ಥಿಗಳಿಗೆ ಐ.ಎ.ಎಸ್., ಐ.ಪಿ.ಎಸ್. ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಉಚಿತವಾಗಿ ಆನ್‌ಲೈನ್ ತರಬೇತಿಯನ್ನು ನಿವೃತ್ತ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳು ನೀಡಲಿದ್ದಾರೆ.

# ಮೂಲಭೂತ ಸಮಸ್ಯೆ ಪರಿಹರಿಸಲು ಆಶ್ರಯ ನಿವಾಸಿಗಳ ಮನವಿ

ಹರಪನಹಳ್ಳಿ, ನ.3- ಪಟ್ಟಣದ ಹೊಸಪೇಟೆ ರಸ್ತೆ, ಆಶ್ರಯ ಕಾಲೋನಿಯ ನಿವಾಸಿಗಳು , ಚರಂಡಿ ದುರಸ್ತಿ, ಬೀದಿ ದೀಪ ಹಾಗೂ ಕುಡಿಯುವ ನೀರು ಸೇರಿದಂತೆ, ವಿವಿಧ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ, ಪುರಸಭೆ ಅಧ್ಯಕ್ಷ ಮಂಜುನಾಥ್ ಇಜಂತ್ಕರ್ ಹಾಗೂ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಕಾಲೋನಿ ನಿವಾಸಿ ಜಿಲಾನ್ ಮಾತನಾಡಿ, ಕಾಲೋನಿಯಲ್ಲಿ ಸ್ವಚ್ಛತೆ ಮರೀಚಿಕೆಯಾಗಿದ್ದು, ಚರಂಡಿ ನೀರು ರಸ್ತೆಯ ಮೇಲೆ ಹರಿದು ದುರ್ವಾಸನೆ ಬೀರುತ್ತಿದೆ.

ಜನರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೊರೊನಾ ಹಿನ್ನೆಲೆಯಲ್ಲಿ ಸಾಂಕ್ರಾಮಿಕ ರೋಗಗಳು ಉಲ್ಬಣವಾಗುವ ಭೀತಿ ಎದುರಾಗಿದೆ ಎಂದು ಅಳಲು ತೋಡಿಕೊಂಡರು.



ಹರಪನಹಳ್ಳಿ

ರಾತ್ರಿ ವೇಳೆ ಬೀದಿ ದೀಪಗಳಿಲ್ಲದೇ ಸಂಚಾರಕ್ಕೆ ಸಂಚಕಾರ ಎನ್ನುವಂತಾಗಿದ್ದು ಮನೆಯಿಂದ ಹೊರಬರಲು ಮಹಿಳೆಯರು, ಮಕ್ಕಳು ಹೆದರುವಂತಾಗಿದೆ. ಕೂಡಲೇ ಪುರಸಭೆ, ಕಾಲೋನಿಯ ಚರಂಡಿ ದುರಸ್ತಿ, ಬೀದಿ ದೀಪ ಹಾಗೂ ಕುಡಿಯುವ ನೀರು ಸೇರಿದಂತೆ, ವಿವಿಧ ಮೂಲ ಭೂತ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಆಗ್ರಹಿಸಿದರು.

ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಮನವಿ ಸ್ವೀಕರಿಸಿ ಮಾತನಾಡಿ, ನಾಳೆ ಬೆಳಿಗ್ಗೆ ಕಾಲೋನಿಗೆ ಅಧ್ಯಕ್ಷರ ಜೊತೆ ಖುದ್ದು ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತ್ಕರ್, ಸದಸ್ಯ ಕಿರಣ್ ಶಾನಭಾಗ್, ಕೌಟಿ ವಾಗೀಶ್, ಹನುಮಂತಪ್ಪ, ಆಶ್ರಯ ಕಾಲೋನಿಯ ನಿವಾಸಿಗಳಾದ ಕೆ.ಗೂಡು ಸಾಬ್, ಹಸೀನಾ, ಅಬಿದಾ ಬಿ, ರಜೀಯಾ ಬೇಗಂ, ರುಬಿನಾ ಬಾನು, ಅಖಿಲಾಬಿ, ಫರೀದಾ, ನಗಿನಾ ಬಾನು, ಗಿರಿಜಮ್ಮ, ಕೆ. ದಾದಾಪೀರ್ ಇನ್ನಿತರರು ಇದ್ದರು.

## ಸಾಣೇಹಳ್ಳಿ ನಾಟಕೋತ್ಸವದಲ್ಲಿಂದು

ಹೊಸದುರ್ಗ ತಾಲ್ಲೂಕು ಸಾಣೇಹಳ್ಳಿ ಶ್ರೀ ಶಿವಕುಮಾರ ಬಯಲು ರಂಗಮಂದಿರದಲ್ಲಿ ನಾಟಕೋತ್ಸವದ ಮೂರನೇ ದಿನದ ಕಾರ್ಯಕ್ರಮ ಇಂದು ಸಂಜೆ 6 ಗಂಟೆಗೆ ನಡೆಯಲಿದೆ.

ಅಥಣಿ ಶ್ರೀ ಮೊಟಗಿಮಠದ ಶ್ರೀ ಪ್ರಭು ಚನ್ನಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಬೆಳಗಾವಿಯ ಡಾ. ಅವಿನಾಶ್ 'ವಚನಗಳಲ್ಲಿ ಆರೋಗ್ಯ-ಆಹಾರ' ಕುರಿತು ಮಾತನಾಡಲಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ವಸತಿ ಸಚಿವ ವಿ. ಸೋಮಣ್ಣ, ಶಾಸಕರಾದ ಜಿ.ಹೆಚ್. ತಿಪ್ಪಾರೆಡ್ಡಿ, ಬೆಳ್ಳಿ ಪ್ರಕಾಶ್, ಕೆ. ಪೂರ್ಣಿಮಾ, ಚಿತ್ರದುರ್ಗ ರಾಜಕೀಯ ಪ್ರಮುಖ ಷಣ್ಮುಖಪ್ಪ ಹನುಮಲಿ, ನಟ ಸಂಗಮೇಶ ಉಪಾಸೆ, ನವದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಭಾಗವಹಿಸಲಿದ್ದಾರೆ.

ಇದೇ ವೇಳೆ ಬೆಂಗಳೂರಿನ ಕೆ.ಆರ್. ಮಂಗಳ ಅವರು 'ನಾನು ಯಾರು ಎಂಬ ಆಳ ನಿರಾಳ' ಕೃತಿ ಲೋಕಾರ್ಪಣೆಗೊಳ್ಳಲಿದೆ. ಅಣ್ಣಿಗೆರೆ ಯಶಸ್ವಿನಿ ಯೋಗ ಸಂಸ್ಥೆಯ ಯೋಗ ನೃತ್ಯ ರೂಪಕ, ಸಾಣೇಹಳ್ಳಿ ಅಕ್ಕನ ಬಳಗದವರಿಂದ ವಚನಗೀತೆ, ಡಾ. ಮಹದೇವ ಬಣಕಾರ ರಚಿಸಿರುವ ವೈ.ಡಿ. ಬದಾಮಿ ನಿರ್ದೇಶನದ ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾಸಂಘದ ಕಲಾವಿದರು 'ಉರಿಲಿಂಗ ಪೆದ್ದಿ' ನಾಟಕ ಅಭಿನಯಿಸಲಿದ್ದಾರೆ.

## ಡಿವೈಎಸ್ಪಿ ಕಚೇರಿಯಲ್ಲಿ ರಾಜ್ಯೋತ್ಸವ



ಕೂಡ್ಲಿಗಿ

ಕೂಡ್ಲಿಗಿ, ನ.3- ಪಟ್ಟಣದ ಡಿವೈಎಸ್ಪಿ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಕನ್ನಡ ನಾಡ ಧ್ವಜಾರೋಹಣ ನೆರವೇರಿಸಿ ಧ್ವಜ ವಂದನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕೂಡ್ಲಿಗಿ ಡಿವೈಎಸ್ಪಿ ಸೇರಿದಂತೆ ಸಿಪಿಐ, ಪಿಎಸ್‌ಐ, ಪೊಲೀಸ್ ಅಧಿಕಾರಿ ವರ್ಗ ಹಾಗೂ ಪೊಲೀಸ್ ಠಾಣಾ ಸಿಬ್ಬಂದಿಯವರು ಹಾಜರಿದ್ದರು.ಪಟ್ಟಣದ ಸಂಗೀತ ಕಲಾವಿದರಾದ ಅಗಸಗಟ್ಟೆ ತಿಂದಪ್ಪ ಹಾಗೂ ನರಸಿಂಹಪ್ಪ ತಮ್ಮ ಶಿಷ್ಯವೃಂದದೊಂದಿಗೆ ಕನ್ನಡ ನಾಡಗೀತೆ ಹಾಗೂ ನಾಡಭಕ್ತಿ ಗೀತೆಗಳನ್ನು ಹಾಡಿದರು.

# ಅತಿಯಾಗಿ ದೇಹ ದಂಡಿಸುವುದು ಅಪಾಯಕ್ಕೆ ದಾರಿ

ದಾವಣಗೆರೆ, ನ.3- ದೇಹ ದಂಡಿಸಬೇಕು, ಆದರೆ ಅತಿಯಾಗಿ ದಂಡಿಸುವುದರಿಂದ ಆರೋಗ್ಯಕ್ಕೆ ಹಾನಿಕರ ಎಂದು ಡಾ. ಬಿ.ಎಸ್. ನಾಗಪ್ರಕಾಶ್ ಮುನ್ನೆಚ್ಚರಿಸಿದರು.

ಅವರು, ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ವೇಟ್ ಲಿಫ್ಟರ್ಸ್ ಅಸೋಸಿಯೇಷನ್, ದಾವಣಗೆರೆ ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್, ನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಜ್ಯಮಟ್ಟದ ವೇಟ್ ಲಿಫ್ಟಿಂಗ್ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ದೇಹವನ್ನು ಬಲಶಾಲಿಯಾಗಿಸಲು ದೇಹ ದಂಡಿಸುವ ಕ್ರಮ ಮಿತವಾಗಿರಬೇಕು. ಮಿತಿ ಮೀರಿ ಅತಿಯಾಗಿ ದಂಡಿಸಿ, ದೇಹಕ್ಕೆ ಶಿಕ್ಷಿಸುವಂತಹ ಒತ್ತಡವಾದರೆ ಅದು ಆರೋಗ್ಯ ಮತ್ತು ಜೀವಹಾನಿಯಂತಹ ಅಪಾಯಕ್ಕೆ ದಾರಿ ಮಾಡಿಕೊಟ್ಟಂತಾಗಲಿದೆ ಎಂದು ಕಿವಿಮಾತು ಹೇಳಿದರು.

ಕನ್ನಡ ಚಿತ್ರರಂಗದ ನಾಯಕ ನಟ, ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅವರ ಸಾವಿನ ಪ್ರಕರಣದ ನಂತರ ಜಿಮ್ ಸೇರಿದಂತೆ ದೇಹ ದಂಡಿಸುವವರಲ್ಲಿ ದಿಗಿಲು ಬಡಿದಂತಾಗಿದ್ದು, ಆರೋಗ್ಯದ ಬಗ್ಗೆ ಅತೀವ ಕಾಳಜಿ ವಹಿಸುತ್ತಾ ಮುನ್ನೆಚ್ಚರಿಕಾ ದೃಷ್ಟಿಯಿಂದ ಇಸಿಜಿ ಮಾಡಿಸಲು ಮುಂದಾಗಿದ್ದು, ಇದಕ್ಕೆ ನನ್ನ ಬಳಿ ಬಂದು ದೇಹ ದಂಡಿಸುವವರು ನಾ ಮುಂದು ತಾ ಮುಂದು ಎನ್ನುತ್ತಾ ಇಸಿಜಿಗೆ ಮುಗಿಬಿದ್ದಿರುವುದೇ ಉದಾಹರಣೆ. ದೇಹ ದಂಡಿಸಿ, ಆದರೆ ದೇಹಕ್ಕೆ ದಂಡನೆ (ಶಿಕ್ಷೆ) ಬೇಡ ಎಂದು ಸಲಹೆ ನೀಡಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತ್ ರಾವ್ ಜಾಧವ್ ಮಾತನಾಡಿ, ದೇಶದಲ್ಲಿ ಪರಿಶುದ್ಧತೆ ಉಳಿದಿರುವುದು ಕ್ರೀಡೆ, ಸೈನ್ಯ, ಕಲಾವಿದರ ಕ್ಷೇತ್ರಗಳಷ್ಟೇ. ಈ ಮೂರು ಕ್ಷೇತ್ರಗಳು ಸ್ವಂತ ಪರಿಶ್ರಮದ ಮೇಲೆ ನಿಂತಿವೆ. ಇಲ್ಲಿ ಯಾವುದೇ ಜಾತಿ, ರಾಜಕೀಯ ಬೆರೆತಿಲ್ಲ. ಕಲಾವಿದರು, ಕ್ರೀಡಾಪಟುಗಳು, ಯೋಧರ ಸೇವೆಗೆ ಸಾವಿಲ್ಲ. ಇವರು ಅಮರರಾದರೂ ಸಮಾಜದ ಜನಮಾನಸದಲ್ಲಿ ಅಜರಾಮರಾಗಿರುತ್ತಾರೆ ಎಂದು ತಿಳಿಸಿದರು.



ವೇಟ್ ಲಿಫ್ಟಿಂಗ್ ಸ್ಪರ್ಧೆಯ ಸಮಾರೋಪದಲ್ಲಿ ಡಾ. ನಾಗಪ್ರಕಾಶ್

ಕ್ರೀಡಾಪಟುಗಳಿಗೆ ತಮ್ಮದೇ ಆದ ಗೌರವವಿದೆ. ಕಳೆದ 15-20 ವರ್ಷಗಳಿಂದೀಚೆಗೆ ಮಾದಕ ಬಳಸುವ ಮುಖೇನ ಕ್ರೀಡೆಯಲ್ಲಿ ಜಯ ಸಾಧಿಸಲು ವಾಮಮಾರ್ಗ ಹಿಡಿಯಲಾಗಿದೆ. ಸ್ಪರ್ಧೆಯಲ್ಲಿ ಗೆಲುವು ಸಾಧಿಸಲು ಮಾದಕ ಬಳಸಿದರೆ ಆರೋಗ್ಯಕ್ಕೆ ಹಾಗೂ ಕ್ರೀಡಾ ಭವಿಷ್ಯಕ್ಕೆ ಹಾನಿ. ಆದ್ದರಿಂದ ನಿಮ್ಮ ಸಾಮರ್ಥ್ಯ, ಪ್ರತಿಭೆ ಪ್ರದರ್ಶಿಸಿ ಕ್ರೀಡೆಯಲ್ಲಿ ಜಯ ಸಾಧಿಸಲು ಮುಂದಾಗಿ. ಕ್ರೀಡೆಯಲ್ಲಿ ಸೋಲು ಗೆಲುವು ಸಹಜ. ಸೋಲು, ಕಾಣಲು ಕಾರಣವೇನೆಂದು ಆತ್ಮಾವಲೋಕನ ಮಾಡಿಕೊಂಡು ಮತ್ತಷ್ಟು ತರಬೇತಿ ಪಡೆದು ಗೆಲುವು ಸಾಧಿಸಲು ಮುನ್ನುಗ್ಗಬೇಕೇ ಹೊರತು, ವಾಮಮಾರ್ಗ ಸರಿಯಲ್ಲ ಎಂದು ಹೇಳಿದರು.

ಇದೇ ವೇಳೆ ಇಂಡಿಯನ್ ವೇಟ್ ಲಿಫ್ಟಿಂಗ್ ಫೆಡರೇಷನ್ ಗೌರವ ಕಾರ್ಯದರ್ಶಿ ಆನಂದೇಗೌಡ ಮತ್ತು ದಾವಣಗೆರೆಯವರಾದ ಗಡಿಭದ್ರತಾ ಪಡೆಯ ಯೋಧ ಹನುಮಂತಪ್ಪ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮೇಯರ್ ಎಸ್.ಟಿ. ವೀರೇಶ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತ್ ರಾವ್ ಜಾಧವ್, ಬಿಜೆಪಿ ಮುಖಂಡ ಮುಪ್ಪಣ್ಣ, ಪಾಲಿಕೆ ಸದಸ್ಯರುಗಳಾದ ರಾಕೇಶ್ ಜಾಧವ್, ಪೈಲ್ವಾನ್ ವೀರೇಶ್, ಪಾಲಿಕೆ ನಾಮ ನಿರ್ದೇಶಿತ ಸದಸ್ಯರುಗಳಾದ ದುರುಗೇಶ್, ಗೋವಿಂದ್, ಚೆನ್ನಕೇಶ್, ದೂಡಾ ಸದಸ್ಯೆ ಗೌರಮ್ಮ ಪಾಟೀಲ್, ಇಂಜಿನಿಯರ್ ಅರವಿಂದ್, ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ಗೌರವಾಧ್ಯಕ್ಷ ಕೆ.ಎಂ. ಸುರೇಶ್, ಅಧ್ಯಕ್ಷ ಹೆಚ್. ಮಹೇಶ್, ಕಾರ್ಯದರ್ಶಿ ಹೆಚ್. ಬಸವರಾಜ್, ಉಪಾಧ್ಯಕ್ಷ ಕೆ. ಎನ್. ಹನುಮಂತಪ್ಪ, ಗೌರವ ಕಾರ್ಯದರ್ಶಿ ಕೆ.ಎಸ್. ಪಾಂಡು, ಸಿದ್ದರಾಜು, ಡಾ. ಸಂತೋಷ್, ನಂದಿ ಸ್ಪೋರ್ಟ್ಸ್ ಮಾಲೀಕ ರವಿ, ಅಂತರರಾಷ್ಟ್ರೀಯ ಕ್ರೀಡಾಪಟುಗಳೂ ಆದ ಪವರ್ ಲಿಫ್ಟಿಂಗ್ ತರಬೇತುದಾರರಾದ ದುರ್ಗೇಶ್, ಕುಮಾರ್ ಸೇರಿದಂತೆ ಇತರರಿದ್ದರು.

**ಎಸ್‌ಡಿಎಂ ಸ್ಪೋರ್ಟ್ಸ್ ಕ್ಲಬ್ ಚಾಂಪಿಯನ್**: ರಾಜ್ಯಮಟ್ಟದ ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಸಮಗ್ರ ಟ್ರೋಫಿಯನ್ನು ತನ್ನದಾಗಿಸಿಕೊಳ್ಳುವ ಮುಖೇನ ಎಸ್ ಡಿಎಂ ಸ್ಪೋರ್ಟ್ಸ್ ಕ್ಲಬ್ ಚಾಂಪಿಯನ್ ಆಗಿ ಹೊರಹೊಮ್ಮಿದೆ.

## ಸೇವಾ ವಲಯದಲ್ಲಿ ಅತಿ ಹೆಚ್ಚು ಬೆಳವಣಿಗೆ

ನವದೆಹಲಿ, ನ. 3 – ದೇಶದ ಸೇವಾ ವಲಯ ಅಕ್ಟೋಬರ್ ತಿಂಗಳಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಅತಿ ಹೆಚ್ಚಿನ ಮಟ್ಟದಲ್ಲಿ ವಿಸ್ತಾರಗೊಂಡಿದೆ ಎಂದು ಮಾಸಿಕ ಸಮೀಕ್ಷೆಯೊಂದು ತಿಳಿಸಿದೆ.

ಕಂಪನಿಗಳು ಹೆಚ್ಚಾಗಿ ಹೊಸ ಬೇಡಿಕೆಗಳನ್ನು ಪಡೆಯುತ್ತಿವೆ. ಇದು ಉತ್ಪಾದನಾ ಚಟುವಟಿಕೆ ವಿಸ್ತಾರಗೊಳ್ಳಲು ಕಾರಣವಾಗಿದೆ. ಆದರೆ, ಹಣ ದುಬ್ಬರದ ಕಳವಳದಿಂದಾಗಿ ಉದ್ಯಮಗಳಲ್ಲಿ ವಿಶ್ವಾಸದ ಮಟ್ಟ ಇನ್ನೂ ಕಡಿಮೆ ಇದೆ ಎಂದು ಇಂಡಿಯಾ ಸರ್ವಿಸಸ್ ಬ್ಯುಸಿನೆಸ್ ಆಕ್ಟಿವಿಟಿ ಇಂಡೆಕ್ಸ್ ತಿಳಿಸಿದೆ.

ಸೆಪ್ಟೆಂಬರ್ ತಿಂಗಳಲ್ಲಿ 55.2ರಷ್ಟಿದ್ದ ಇಂಡಿಯಾ ಸರ್ವಿಸಸ್ ಬ್ಯುಸಿನೆಸ್ ಸೂಚ್ಯಂಕ, ಅಕ್ಟೋಬರ್ ತಿಂಗಳಲ್ಲಿ 58.4ಕ್ಕೆ ಹೆಚ್ಚಾಗಿದೆ. ಇದು ಹತ್ತೂವರೆ ವರ್ಷಗಳಲ್ಲಿ ಅತಿ ಹೆಚ್ಚಿನ ಮಟ್ಟವಾಗಿದೆ.

ಸತತ ಮೂರು ತಿಂಗಳಿನಿಂದ ಸೇವಾ ವಲಯ ವಿಸ್ತರಣೆಯಲ್ಲಿದೆ. ಆದರೆ, ಕಚ್ಚಾ ವಸ್ತುಗಳ ಬೆಲೆ ಸತತ ಏರುಮುಖವಾಗಿದೆ. ಇಂಧನ, ಸರಕುಗಳು, ಸಿಬ್ಬಂದಿ ಹಾಗೂ ಸಾರಿಗೆ ವೆಚ್ಚಗಳು ಏರುಮುಖವಾಗಿವೆ. ನಿರಂತರ ಬೆಲೆ ಏರಿಕೆ ಮುಂದಿನ ವರ್ಷದ ಬೆಳವಣಿಗೆ ಮೇಲೆ ಒತ್ತಡ ತರಬಹುದು ಎಂದು ಕಳವಳ ವ್ಯಕ್ತವಾಗುತ್ತಿದೆ.

ಅಕ್ಟೋಬರ್ ತಿಂಗಳಲ್ಲಿ ನೇಮಕಾತಿ ಪ್ರಮಾಣ ಅಲ್ಪ ಮಟ್ಟದಲ್ಲಿ ಹೆಚ್ಚಾಗಿದೆ. ಫೆಬ್ರವರಿ 2020ರ ನಂತರ ಇದೇ ಮೊದಲ ಬಾರಿಗೆ ನೇಮಕಾತಿಯಲ್ಲಿ ಸ್ವಲ್ಪ ಮಟ್ಟಿಗಿನ ಚುರುಕು ಕಂಡು ಬಂದಿದೆ.

## ಹಸಿರು ಪಟಾಕಿ ಬಳಸಲು ಮನವಿ

ದಾವಣಗೆರೆ, ನ. 3- ಹಸಿರು ಪಟಾಕಿಗಳನ್ನು ಬಿಟ್ಟು ಉಳಿದ ಯಾವುದೇ ಪಟಾಕಿಗಳನ್ನು ಮಾರಾಟ ಮಾಡತಕ್ಕದ್ದಲ್ಲ ಮತ್ತು ಹಚ್ಚತಕ್ಕದ್ದಲ್ಲ. ಹಸಿರು ಪಟಾಕಿಗಳನ್ನು ಅಧಿಕೃತವಾಗಿ ಪರವಾನಗಿ ಪಡೆದ ಮಾರಾಟಗಾರರು ಮಾತ್ರ ಮಾರಾಟ ಮಾಡತಕ್ಕದ್ದು. ಪರವಾನಿಗೆದಾರರು ಪರವಾನಿಗೆ ಪ್ರತಿಯನ್ನು ಸಾರ್ವಜನಿಕರಿಗೆ ಕಾಣು ವಂತೆ ಪ್ರದರ್ಶಿಸಬೇಕು. ಪರವಾನಗಿ ಪತ್ರ ಪಡೆದಂತವರು ಕಡ್ಡಾಯವಾಗಿ ಮಳಿಗೆಗಳಲ್ಲಿ ಹಾಜರಿರಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ದೀಪಾವಳಿ ಹಬ್ಬದ ಸಂಬಂಧ ನಾಳೆ ದಿನಾಂಕ 4 ರಂದು ಅಮಾವಾಸ್ಯೆ ಹಾಗೂ 5ರಂದು ಬಲಿಪಾಡ್ಯಮಿ ಸಮಯದಲ್ಲಿ ರಾತ್ರಿ 8 ರಿಂದ 10 ರವರೆಗೆ ಮಾತ್ರ ಪಟಾಕಿ ಸಿಡಿಸುವುದು, ಕೋವಿಡ್ ಹಿನ್ನೆಲೆಯಲ್ಲಿ ಹಬ್ಬವನ್ನು ಸರಳ ರೀತಿಯಲ್ಲಿ ಮಾಲಿನ್ಯ ರಹಿತವಾಗಿ ಆಚರಿಸಬೇಕು.

ಹಸಿರು ಪಟಾಕಿಗಳನ್ನು ಮಾರಾಟ ಮಾಡುವ ಮಳಿಗೆಗಳ ಸುತ್ತಮುತ್ತ ದಿನನಿತ್ಯ ಸ್ಯಾನಿಟೈಸೇಷನ್ ಮಾಡುವುದು ಹಾಗೂ ಖರೀದಿಗೆ ಬರುವ ಸಾರ್ವಜನಿಕರಿಗೆ ಸ್ಯಾನಿಟೈಸರ್ ಹಾಗೂ ಥರ್ಮಲ್ ಸ್ಕ್ರೀನಿಂಗ್ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಕನಿಷ್ಠ 6 ಅಡಿ ಸಾಮಾಜಿಕ ಅಂತರವನ್ನು ಗುರುತಿಸುವುದು. ಪಟಾಕಿ ಮಾರುವ ವ್ಯಾಪಾರಸ್ಥರು ಮತ್ತು ಖರೀದಿಗೆ ಬರುವ ಸಾರ್ವಜನಿಕರು ಕಡ್ಡಾಯವಾಗಿ ಮುಖಗವಸು ಧರಿಸತಕ್ಕದ್ದು. ಹಸಿರು ಪಟಾಕಿಗಳ ಖರೀದಿಯ ಸಂದರ್ಭದಲ್ಲಿ ಯಾವುದೇ ರೀತಿಯ ಜನದಟ್ಟಣೆಯಾಗದಂತೆ ಕಟ್ಟುನಿಟ್ಟಾಗಿ ನೋಡಿಕೊಳ್ಳತಕ್ಕದ್ದು.

ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳು ಹಸಿರು ಪಟಾಕಿ ಸಿಡಿತ ಪ್ರಕ್ರಿಯೆಯು ನಿಗದಿತ ಅವಧಿಯಲ್ಲಿ ನಡೆಯುವಂತೆ ನೋಡಿಕೊಳ್ಳುವುದು ಮತ್ತು ಕೋವಿಡ್-19ರ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿದವರ ಮೇಲೆ ವಿಪತ್ತು ನಿರ್ವಹಣಾ ಕಾಯ್ದೆ ಮತ್ತು ಇತರೆ ಕಾನೂನುಗಳನುಸಾರ ಕಾನೂನು ಕ್ರಮ ಕೈಗೊಳ್ಳುವುದು.

ವಾಯು ಮಾಲಿನ್ಯ, ಶಬ್ದ ಮಾಲಿನ್ಯ ಮತ್ತು ಪಟಾಕಿ ಸಿಡಿಸಿದ ನಂತರದ ಘನ ತ್ಯಾಜ್ಯ ವಸ್ತುಗಳಿಂದ ಮಾಲಿನ್ಯ ಉಂಟಾಗು ವುದರಿಂದ ಸರಣಿ ಸ್ಫೋಟಕ ಪಟಾಕಿಗಳನ್ನು ತಯಾರಿಸುವುದು, ಮಾರಾಟ ಮಾಡುವುದು ಮತ್ತು ಬಳಸುವುದನ್ನು ನಿಷೇಧಿಸಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ಎಲ್ಲರನ್ನೂ ಪ್ರೀತಿಸಿ, ಎಲ್ಲರೊಳಗೆ ಒಂದಾಗುವ ಗುಣ ಬೆಳೆಸಿಕೊಳ್ಳಿ

## ಸಮಾಜದ ಸಂಘಟನಾ ಸಭೆಯಲ್ಲಿ ನಂದಿಗುಡಿ ಶ್ರೀಗಳ ಕಿವಿಮಾತು

ಮಲೇಬೆನ್ನೂರು, ನ.3- ಮಠ, ಪೀಠ ಶಾಶ್ವತವೇ ಹೊರತು ವ್ಯಕ್ತಿ ಅಲ್ಲ. ಇವತ್ತು ನಾವು, ನೀವು ಇದ್ದೇವೆ. ನಾಳೆ ಮತ್ತೊಬ್ಬರು ಇರುತ್ತಾರೆ ಎಂದು ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ಭಾವನಾತ್ಮಕವಾಗಿ ಹೇಳಿದರು.

ಅವರು ಜಿಗಳಿ ಗ್ರಾಮದ ದಿ. ಎನ್. ರುದ್ರೇಗೌಡ ವೃತ್ತದಲ್ಲಿ ಹಮ್ಮಿಕೊಂಡಿದ್ದ ಸಮಾಜದ ಸಂಘಟನಾ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ನೊಳಂಬರೆಂದರೆ ಹುಂಬತನ ಬೇಡ, ಎಲ್ಲರನ್ನೂ ಪ್ರೀತಿಸಿ, ಎಲ್ಲರೊಳಗೆ ಒಂದಾಗುವ ಗುಣ ಬೆಳಸಿಕೊಳ್ಳಿ ಎಂದು ಕಿವಿ ಮಾತು ಹೇಳಿದ ಶ್ರೀಗಳು, ಭಾವನಾತ್ಮಕ ಪ್ರೀತಿ ಇದ್ದರೆ ಮಾತ್ರ ಸಂಘಟನೆ, ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸಮಾಜ ಮುಖಿಯಾಗಿ ನಿಲ್ಲಿರಿ. ನಿಮ್ಮ ಹಿಂದೆ ಇಡೀ ಸಮಾಜ ಇರುತ್ತದೆ ಎಂದು ಜನರಲ್ಲಿ ಉತ್ಸಾಹ ತುಂಬಿಸಿದರು.

ಇಂದೂಧರ್ ಮತ್ತು ಸ್ವಾಮೀಜಿ ಒಂದಾಗಿದ್ದಾರೆ ಮುಂದೇನು? ಎಂಬ ಪ್ರಶ್ನೆ ಯಾರಲ್ಲೂ ಬೇಡ. ಇಂದೂಧರ್ ನಮ್ಮ ಸಮಾಜದ ಮಗ. ಅವರನ್ನು ಮನ್ನಿಸಿ ನಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗೋಣ. ಕರ್ನಾಟಕದ ನೊಳಂಬ ವೀರಶೈವ ಸಮಾಜದಲ್ಲಿ ಇಂದೂಧರ್ ಪ್ರಚಲಿತ ವ್ಯಕ್ತಿಯಾಗಿದ್ದು, ಅವರು ಎಲ್ಲರಿಗೂ ಚಿರಪರಿಚಿತರಾಗಿದ್ದಾರೆ. ಅವರು ತಮ್ಮ ತಂದೆ ರುದ್ರೇಗೌಡರಂತೆ ರಾಜಕೀಯವಾಗಿ ಎತ್ತರಕ್ಕೆ ಬೆಳೆಯಲಿ. ಅದಕ್ಕಾಗಿ ಅವರು ಒಳ್ಳೆಯ ದಾರಿಯಲ್ಲಿ ಸಾಗಬೇಕೆಂದು ಸ್ವಾಮೀಜಿ ಬುದ್ಧಿ ಮಾತು ಹೇಳಿದರು.



ಹಿಂದಿನ ಎಲ್ಲಾ ಕಹಿ ಘಟನೆಗಳನ್ನು ಮರೆತು ನಾವೆಲ್ಲರೂ ಸಮಾಜ ಹಾಗೂ ಮಠದ ಅಭಿವೃದ್ಧಿಗಾಗಿ ಭಾವನಾತ್ಮಕವಾಗಿ ಒಂದಾಗೋಣ. ಮಠ ನಿಮ್ಮದೇ ನಾವು ಇಲ್ಲಿ ಕಾಯುವ ಕೆಲಸ ಮಾಡುತ್ತಿದ್ದೇವೆ. ಇಂದೂಧರ್ ನಮ್ಮನ್ನು ಗ್ರಾಮಕ್ಕೆ ಕರೆಸಿ ಮೆರವಣಿಗೆ, ಪಾದಪೂಜೆ ಹಾಗೂ ಸಮಾಜದ ಸಂಘಟನಾ ಸಭೆ ನಡೆಸಿ, ಸಮಾಜಕ್ಕೆ ಉತ್ತಮ ಸಂದೇಶ ರವಾನಿಸಿದ್ದಾರೆ. ಸಹೋದರತ್ವ, ಸಾಮರಸ್ಯದಲ್ಲಿ ಜಿಗಳಿ ಗ್ರಾಮ ಮಾದರಿಯಾಗಿದೆ ಎಂದು ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಡಿಸೆಂಬರ್ 13 ರಂದು ನಂದಿಗುಡಿಯಲ್ಲಿ ಕೆಂಚ ವೀರೇಶ್ವರ ಶ್ರೀಗಳ ಪುಣ್ಯಾರಾಧಾನೆ ಕಾರ್ಯಕ್ರಮವನ್ನು ಈ ಬಾರಿ ಬಹಳ ವಿಶೇಷವಾಗಿ ಹಮ್ಮಿಕೊಂಡಿದ್ದು, ಪೂರ್ವಭಾವಿಯಾಗಿ ನ.14 ರಂದು ಮಠದಲ್ಲಿ ಭಕ್ತರ ಸಭೆ ಕರೆಯಲಾಗಿದೆ ಎಂದು ಸ್ವಾಮೀಜಿ ತಿಳಿಸಿದರು.

ಸಮಾಜದ ಮುಖಂಡ ಹೊನ್ನಾಳಿ ತಾಲ್ಲೂಕಿನ ನೇಮಿಚಂದ್ರಪ್ಪ ಮಾತನಾಡಿ, ಸಮಾಜದಲ್ಲಿ ಕೊಕ್ಕೆ ಹಾಕುವ ಕೆಲಸವನ್ನು ಯಾರೂ ಮಾಡಬಾರದು. ಸಮಾಜ, ಮಠ ಬೇಡವಾದರೆ ಸುಮ್ಮನೆ ಇರಿ. ಅನಾವಶ್ಯಕವಾಗಿ ತೊಂದರೆ ಕೊಡಬೇಡಿ ಎಂದು ಕೈ ಮುಗಿದರು.

ವಕೀಲ ವಾಸನದ ಗಂಟಿ ಕುಬೇರಗೌಡ, ಉಪನ್ಯಾಸಕ ಹಿಂಡಸಘಟ್ಟೆ ಹನುಮಗೌಡ, ನಂದಿತಾವರೆ ಮುರುಗೇಂದ್ರಯ್ಯ ಮಾತನಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಇಂದೂಧರ್ ಎನ್. ರುದ್ರೇಗೌಡ, ಹಿಂದೆ ನಡೆದ ಯಾವುದೇ ಘಟನೆಗಳನ್ನು ಮೆಲುಕು ಹಾಕದೇ ಸಮಾಜ ಹಾಗೂ ಮಠಕ್ಕಾಗಿ ನಿಸ್ವಾರ್ಥದಿಂದ ದುಡಿಯುತ್ತೇನೆ ಎಂದರು.

ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ನಂದಿ ಸೌಹಾರ್ದ ಸಹಕಾರಿ ಅಧ್ಯಕ್ಷ ಹಳ್ಳಿಹಾಳ್ ವೀರನಗೌಡ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ, ಕೊಕ್ಕನೂರು ಆಂಜನೇಯ ಪಾಟೀಲ್, ದಾವಣಗೆರೆಯ ಡಾ. ದಡ್ಡಿಕೊಪ್ಪ, ಎನ್.ಬಿ. ಸಿದ್ಧರಾಮಯ್ಯ, ಬೇವಿನಹಳ್ಳಿಯ ಬೆನ್ನೂರು ಕುಬೇರಪ್ಪ, ವಕೀಲ ತಿಮ್ಮನಗೌಡ, ಹುಲ್ಲತ್ತಿ ರುದ್ರಗೌಡ, ಬಂಡೇರ ರಂಗಪ್ಪ, ಮಲೇಬೆನ್ನೂರಿನ ಎಂ.ಕೆ. ಗಜೇಂದ್ರ ಸ್ವಾಮಿ, ಜಿಗಳೇರ ಹಾಲೇಶಪ್ಪ, ಗ್ರಾಮದ ಜಿ.ಎಂ. ಆನಂದಪ್ಪ, ಬಿ.ಎಂ. ದೇವೇಂದ್ರಪ್ಪ, ಎಂ.ವಿ. ನಾಗರಾಜ್, ಕೆ.ಎಸ್. ನಂದ್ಯೆಪ್ಪ, ಕೆ.ಆರ್. ರಂಗಪ್ಪ, ಡಾ. ಎನ್. ನಾಗರಾಜ್, ಸಿ. ಪರಮೇಶ್ವರಪ್ಪ, ಎಕ್ಕೆಗೊಂದಿ ರುದ್ರಗೌಡ, ಎನ್.ಎಂ. ಪಾಟೀಲ್, ವೈ.ಆರ್. ಚೇತನ್, ಜಿ.ಪಿ. ಹನುಮಗೌಡ, ಜಿ.ಎಂ. ನಾಗರಾಜ್, ಬಿ. ಸೋಮಶೇಖರಚಾರಿ, ಬಿ. ಹೆಚ್. ಮಂಜುನಾಥ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಶಿಕ್ಷಕ ಕರಿಬಸಯ್ಯ ಸ್ವಾಗತಿಸಿದರು. ವಕೀಲ ನಂದಿತಾವರೆ ತಿಮ್ಮನಗೌಡ ನಿರೂಪಿಸಿದರು. ಕೆ.ಎನ್. ಹಳ್ಳಿ ಬಿ.ಬಿ. ನಿಂಗನಗೌಡ ವಂದಿಸಿದರು.

## ಬಾಪೂಜಿ ಶಾಲೆಯಲ್ಲಿ ರಾಜ್ಯೋತ್ಸವ

ದಾವಣಗೆರೆ, ನ.3- ನಗರದ ಬಾಪೂಜಿ ವಿದ್ಯಾಸಂಸ್ಥೆಯಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು. ಸಂಸ್ಥೆಯ ಪ್ರಾಚಾರ್ಯ ಮಂಜುನಾಥ್ ರಂಗರಾಜು, ಶೈಕ್ಷಣಿಕ ಮಾರ್ಗದರ್ಶಕ ಮಂಜಪ್ಪ, ವಿಭಾಗದ ಮುಖ್ಯಸ್ಥರು, ಶಿಕ್ಷಕರು ಹಾಜರಿದ್ದರು.

**ಬೆಳ್ಳಿ ಫೋಟೋಗಳು ಹೋಲ್‌ಸೇಲ್ ದರದಲ್ಲಿ ಸಿಗುತ್ತವೆ**

ಮದುವೆ, ಗೃಹಪ್ರವೇಶ, ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ, ಸರಸ್ವತಿ, ಕನ್ನಿಕಾ ಪರಮೇಶ್ವರಿ, ಸತ್ಯನಾರಾಯಣ ಸ್ವಾಮಿ ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವಪಾರ್ವತಿ, ರಾಘವೇಂದ್ರ, ಆಂಜನೇಯ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರಲಿಂಗೇಶ್ವರ, ವೀರಭದ್ರಸ್ವಾಮಿ, ಚಾಮುಂಡೇಶ್ವರಿ ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂಕಾರದ (ಲೈಟಿಂಗ್) ಫೋಟೋಗಳು ದೊರೆಯುತ್ತವೆ.

ಸ್ಥಳ : ಲಕ್ಷ್ಮಿ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್ಸ್, ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.

**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**

ಬಟವಾಡಿ ವೃತ್ತ, ತುಮಕೂರು ಫೋ: 8496044942, 8277409101

**23-12-2021 ದೆಹಲಿ-ಕಾಶಿ ವಿಮಾನ ಪ್ರವಾಸ:** ದೆಹಲಿ, ಕಾಶಿ, ಆಗ್ರಾ, ಮಥುರಾ, ಅಯೋಧ್ಯೆ, ನೈಮಿಷಾರಣ್ಯ, ಸಾರಾನಾಥ್ 8 ದಿನಗಳು ರೂ. 29000/– ಒಬ್ಬರಿಗೆ (2x2 ಎಸಿ ಬಸ್ಸಿನಲ್ಲಿ ಲೋಕಲ್ ಸೈಟ್ ಸೀಯಿಂಗ್)

**6-1-2022 ತಮಿಳುನಾಡು ಬಸ್ ಪ್ರವಾಸ :** ರಾಮೇಶ್ವರ, ತ್ರಿಪುರಕೊಂಡ್ರಂ, ತಂಜಾವೂರು, ಕನ್ಯಾಕುಮಾರಿ, ತಿರುಚೆಂದೂರ್, ಮದುರೈ, ಈಶ ಟೆಂಪಲ್ ಕೊಯಮತ್ತೂರು, 4 ದಿನ ರೂ. 7500/– ಒಬ್ಬರಿಗೆ

**30-1-2022 ಜ್ಯೋತಿರ್ಲಿಂಗ ವಿಮಾನ ಪ್ರವಾಸ :** ಕಾಶಿ ವಿಶ್ವನಾಥ ಜ್ಯೋತಿರ್ಲಿಂಗ, ಓಂಕಾರೇಶ್ವರ ಜ್ಯೋತಿರ್ಲಿಂಗ, ಮಹಾಕಾಳೇಶ್ವರ ಜ್ಯೋತಿರ್ಲಿಂಗ, ಇಂದೂರ್, ಅಲಹಾಬಾದ್ ತ್ರಿವೇಣಿ ಸಂಗಮ ಪುಣ್ಯಸ್ನಾನ, ಸಾರಾನಾಥ್, ಗಯಾ, ಬುದ್ದಗಯಾ. 7 ದಿನಗಳು ರೂ. 28000/– ಒಬ್ಬರಿಗೆ (2x2 ಎಸಿ ಬಸ್ಸಿನಲ್ಲಿ ಲೋಕಲ್ ಸೈಟ್ ಸೀಯಿಂಗ್)

ಎಲ್ಲಾ ಪ್ರವಾಸಕ್ಕೂ ಮಿನರಲ್ ವಾಟರ್ ನೊಂದಿಗೆ ಊಟ, ರೂಂ ವಸತಿ ಸೇರಿದೆ

## ದುಗ್ಗಮ್ಮಗೆ ಇಂದು ಬುತ್ತಿ ಪೂಜೆ



ದಾವಣಗೆರೆ : ನಗರದೇವತೆ ಶ್ರೀ ದುರ್ಗಾಂಬಿಕ ದೇವಿಗೆ ಇಂದು ಅಮವಾಸ್ಯೆ ದಿನ ಬೆಳಿಗ್ಗೆ 8 ಗಂಟೆಗೆ ಮೊಸರು ಬುತ್ತಿ ಪೂಜೆಯನ್ನು ಏರ್ಪಡಿಸಲಾಗಿದೆ. ನವರಾತ್ರಿ ಹಬ್ಬದಲ್ಲಿ 9 ದಿನಗಳ ಕಾಲ ದೇವಿ ರೌದ್ರಾವತಾರ ತಾಳಿದ್ದು, ಅಮ್ಮ ಶಾಂತಚಿತ್ತಳಾಗಲಿ ಎಂಬ ಕಾರಣಕ್ಕೆ ದೇವಸ್ಥಾನ ಟ್ರಸ್ಟ್ ವತಿಯಿಂದ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಭಕ್ತಾದಿಗಳು ಆಗಮಿಸಿ, ಶ್ರೀ ದೇವಿಯ ದರ್ಶನ ಪಡೆದು, ಬುತ್ತಿ ಪ್ರಸಾದ ಸ್ವೀಕರಿಸಿ ಶ್ರೀದೇವಿಯ ಕೃಪೆಗೆ ಪಾತ್ರವಾಗುವಂತೆ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ಕೋರಿದ್ದಾರೆ.

## ಇಂದು ಇಷ್ಟಲಿಂಗ ಮಹಾಪೂಜೆ



ಮಲೇಬೆನ್ನೂರು ಪಟ್ಟಣದ ಶ್ರೀ ಗುರು ರೇಣುಕ ರೈಸ್ ಇಂಡಸ್ಟ್ರೀಸ್‌ನಲ್ಲಿ ಇಂದು ಬೆಳಗ್ಗೆ 9ಕ್ಕೆ ದೀಪಾವಳಿ ಅಮವಾಸ್ಯೆ ಪ್ರಯುಕ್ತ ರಂಭಾಪುರಿ ಜಗದ್ಗುರುಗಳವರಿಂದ ಇಷ್ಟ ಲಿಂಗ ಮಹಾ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ಬಿ.ಎಂ. ನಂಜಯ್ಯ, ಬಿ.ಎಂ. ವಾಗೀಶ್‌ಸ್ವಾಮಿ ತಿಳಿಸಿದ್ದಾರೆ.

## ನೀಟ್ ಪರೀಕ್ಷೆಯಲ್ಲಿ ವಿಶ್ವಚೇತನ ಮಕ್ಕಳ ಸಾಧನೆ




ದಾವಣಗೆರೆ, ನ.3- ನೀಟ್ ಪರೀಕ್ಷೆಯಲ್ಲಿ ಶ್ರೀ ವೈಷ್ಣವಿ ಚೇತನ ಹಾಗೂ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಪ.ಪೂ ಕಾಲೇಜು ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಉತ್ಸಲ ಚೌಧರಿ 720 ಕ್ಕೆ 695 ಅಂಕಗಳನ್ನು ಪಡೆದು, ಜಿಲ್ಲೆಗೆ ಪ್ರಥಮ, ರಾಷ್ಟ್ರಕ್ಕೆ 304ನೇ ರ‍್ಯಾಂಕ್, ಎಂ.ಬಿ. ವಿಸ್ಮಯ 677 ಅಂಕ ಪಡೆದು ಜಿಲ್ಲೆಗೆ 2ನೇ ಸ್ಥಾನ ಹಾಗೂ ರಾಷ್ಟ್ರಕ್ಕೆ 1064ನೇ ರ‍್ಯಾಂಕ್ ಪಡೆದಿದ್ದಾರೆ.

## ನೀಟ್‌ನಲ್ಲಿ 'ದ ಟೀಮ್ ಅಕಾಡೆಮಿ'ಯ ಸಾಧನೆ



ದಾವಣಗೆರೆ, ನ.3- ದ ಟೀಮ್ ಐಐಟಿ ಮತ್ತು ಮೆಡಿಕಲ್ ಅಕಾಡೆಮಿಯು ಪ್ರಥಮ ಬಾರಿಗೆ ನೀಟ್ ಲಾಂಗ್ ಟರ್ಮ್ ತರಗತಿಗಳನ್ನು ಪ್ರಾರಂಭಿಸಿದ್ದು, ಆರಂಭದಲ್ಲೇ ಅತ್ಯುತ್ತಮ ಫಲಿತಾಂಶವನ್ನು ನೀಡಿದೆ ಎಂದು ಅಧ್ಯಕ್ಷ ಕೆ.ಎಂ. ಮಂಜಪ್ಪ ತಿಳಿಸಿದ್ದಾರೆ. ಅಕಾಡೆಮಿಯ ವಿದ್ಯಾರ್ಥಿ ಬಿ.ಎಸ್. ವಿರಾಜ್ 720 ಕ್ಕೆ 661 ಅಂಕಗಳನ್ನು ಗಳಿಸಿ, ಆಲ್ ಇಂಡಿಯಾ ರ‍್ಯಾಂಕ್ 2256 ಪಡೆದಿದ್ದಾರೆ. ಸದರಿ ಸಾಲಿನಲ್ಲಿ 18 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, 17 ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶವನ್ನು ಗಳಿಸುವ ಮೂಲಕ ವೈದ್ಯಕೀಯ ಸೀಟುಗಳನ್ನು ಪಡೆದುಕೊಳ್ಳಲಿದ್ದಾರೆ ಎಂದು ಕಾರ್ಯದರ್ಶಿ ನಾಗಭೂಷಣ್ ಹೇಳಿದ್ದಾರೆ.















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte